
India ECHOES
ONE WORLD ONE HUMANITY
ಆಂತರಿಕ ಪ್ರಸಾರಕ್ಕಾಗಿ ಮಾತ್ರ



"ಧ್ಯಾನಿಸಿ, ಮುಂದುವರೆಯುತ್ತಾ ಎಲ್ಲವನ್ನೂ ತೆಗೆದುಹಾಕಿ, ನಾನು ಸಾಧನೆಯಲ್ಲಿ ಪರಿಪೂರ್ಣನಾಗಿದ್ದೇನೆ, ಶ್ರಮಬದ್ಧವಾಗಿದ್ದೇನೆ, ಹತ್ತು ನಿಯಮಗಳ ಪ್ರಕಾರವಾಗಿದ್ದೇನೆ ಎಂದಾದರೆ, ಆಗ ನೀವು, ನಾನು ಯಾವ ಒಂದು ಚಾರಿತ್ರ್ಯದಿಂದ ಹುಟ್ಟಿರುವೆನೋ ಅದರಿಂದ ನಾನು ಚಾರಿತ್ರ್ಯವಿಲ್ಲದ ಒಂದು ಆತ್ಮವೆಂಬುದನ್ನು ಕಂಡುಕೊಳ್ಳುವಿರಿ".

ಚಾರಿತ್ರ್ಯ ನಿರ್ಮಾಣ ಸಭೆಯಲ್ಲಿ, ಭಾರತದ ಕಾರ್ಯನಿರ್ವಾಹಕರನ್ನು ಕುರಿತು 9ನೇ ಅಕ್ಟೋಬರ್ 2010 ,ಚೆನ್ನೈ, ಭಾರತ.

ಉತ್ತರ ಅಮೇರಿಕಾದ ಸಭೆಯು ಸೆಪ್ಟೆಂಬರ್ 21 ರಂದು ಮುಕ್ತಾಯಗೊಂಡ ನಂತರ ಗುರುಗಳು ಆಶ್ರಮ ಮತ್ತು ಗಾಯತ್ರಿಗೆ ಭೇಟಿ ನೀಡುವುದರಲ್ಲಿ ತಮ್ಮ ಸಮಯವನ್ನು ಕಳೆದರು. ವಾರದ ದಿನಗಳನ್ನು ಅವರು ಗಾಯತ್ರಿಯಲ್ಲಿ ಕಳೆಯುತ್ತಿದ್ದರು ಹಾಗೂ ವಾರದ ಕೊನೆಯ ದಿನಗಳನ್ನು ಆಶ್ರಮದಲ್ಲಿ ಕಳೆಯುತ್ತಿದ್ದರು. ಗಾಯತ್ರಿಯಲ್ಲಿ ಕೆಲವೊಮ್ಮೆ ಅವರು ಅಭ್ಯಾಸಿಗಳನ್ನು ಭೇಟಿಮಾಡುತ್ತಿದ್ದರು. ಹಾಗೂ ಸತ್ಸಂಗವನ್ನು ನಡೆಸಿಕೊಡುತ್ತಿದ್ದರು.

ಒಂದು ದಿನ ಗಾಯತ್ರಿಯಲ್ಲಿ ಕಾಫಿಯನ್ನು ತೆಗೆದುಕೊಳ್ಳುತ್ತಿರುವಾಗ, ವೈದ್ಯ ಹಾಗೂ ರೋಗಿಯ ಸಂಬಂಧದ ಬಗ್ಗೆ ಮಾತನಾಡುತ್ತಾ "ಎಲ್ಲಿ ಶ್ರದ್ಧೆ ಇರುವುದಿಲ್ಲವೋ ಅಲ್ಲಿ ಭಯವು ತಲೆಯೆತ್ತುತ್ತದೆ" ಎಂದು ಹೇಳಿದರು.

ಸೆಪ್ಟೆಂಬರ್ 9 ರಿಂದ 23 ರವರೆಗೆ ಎರಡು ವಾರಗಳನ್ನು ಸಂಪೂರ್ಣವಾಗಿ ಆಶ್ರಮದಲ್ಲಿ ಕಳೆದರು. ಸೆಪ್ಟೆಂಬರ್16 ರಂದು ಗುರುಗಳ ಒಂದು ದಿನದ ಮಟ್ಟಿಗೆ ಪುದುಚೆರ್ರಿಗೆ (ಹಳೆಯ ಪಾಂಡಿಚೆರಿ) ಭೇಟಿ ನೀಡಿದರು. ಪುದುಚೆರ್ರಿ, ಕಡ್ಡಲೂರ್, ಎಲ್ಲುಪ್ಪುರಂ ಹಾಗೂ ನೈವೇಲಿಯ ಸುಮಾರು 60 ಅಭ್ಯಾಸಿಗಳು ಹಾಗೂ 20 ಮಕ್ಕಳು ಹೋಟೆಲ್ ಡ್ಯೂನ್ ಎಕೋ ರೆಸಾರ್ಟ್‌ನಲ್ಲಿ ಅವರನ್ನು ಹೃತ್ಪೂರ್ವಕವಾಗಿ ಬರಮಾಡಿಕೊಂಡರು. ಭೇಟಿನೀಡಿದ್ದ ಅಭ್ಯಾಸಿಗಳಿಗಾಗಿ ಭೋಜನ ಹಾಗೂ ವಸತಿಯ ವ್ಯವಸ್ಥೆಯನ್ನು ಹಾಗೂ ಸತ್ಸಂಗದ ವ್ಯವಸ್ಥೆಯನ್ನು ಪುದುಚೆರ್ರಿಯ 'ಜವಾಹರ್ ನವೋದಯ ವಿದ್ಯಾಲಯ' ಶಾಲೆಯಲ್ಲಿ ಮಾಡಲಾಗಿತ್ತು. ಅಂದು ಸಂಜೆ ಶಾಲೆಯ ಮಕ್ಕಳು ಗುರುಗಳನ್ನು ಸ್ವಾಗತಿಸಿದರು ಹಾಗೂ ಕೆಲವು ಭಜನೆಗಳನ್ನು ಹಾಡಿದರು. ನಂತರ ಗುರುಗಳು ಸತ್ಸಂಗವನ್ನು ನಡೆಸಿಕೊಟ್ಟರು.

17 ರ ಬೆಳಗ್ಗೆ ಗುರುಗಳು ಸತ್ಸಂಗವನ್ನು ನಡೆಸಿಕೊಟ್ಟರು ನಂತರ ಸಹೋದರ ಅಜಯ್ ಭಟ್ಟರ್‌ರವರು ಭಾಷಣವನ್ನು ನೀಡಿದರು. ಸಹೋದರಿ ವರ್ಜೀನ್‌ರವರು ಸೃಜನಾತ್ಮಕ ಕಥಕ್ ಶೈಲಿಯ ಮನೋಹರವಾದ ನೃತ್ಯಪ್ರದರ್ಶನವನ್ನು ಮಾಡಿದರು. ಶಾಲೆಯ ಬೋಧಕ ಸಿಬ್ಬಂದಿಯ ಸುಮಾರು 10 ಜನ ಶಿಕ್ಷಕರು ಧ್ಯಾನವನ್ನು ಪ್ರಾರಂಭಿಸುವ ಇಚ್ಛೆಯನ್ನು ವ್ಯಕ್ತಪಡಿಸಿದರು. ಗುರುಗಳು ತಮ್ಮ ಸಮಯವನ್ನು ವಿಶ್ರಾಂತಿ ತೆಗೆದುಕೊಳ್ಳುವುದರಲ್ಲಿ ಹಾಗೂ ತಮ್ಮೊಂದಿಗೆ ಪ್ರಯಾಣಿಸಿದ ಅಭ್ಯಾಸಿಗಳೊಂದಿಗೆ ಸಂಭಾಷಣೆ ಮಾಡುವುದರಲ್ಲಿ ಕಳೆದರು. ಸಂಜೆ 4:45 ಕ್ಕೆ ಸರಿಯಾಗಿ ಗುರುಗಳು ಚೆನ್ನೈಗೆ ಪ್ರಯಾಣ ಬೆಳೆಸಿದರು. ಅಭ್ಯಾಸಿಗಳ ಈ ಸಣ್ಣ ಗುಂಪಿಗೆ ಗುರುಗಳೊಂದಿಗೆ ಅತ್ಯಂತ ಸನಿಹದಲ್ಲಿರುವ ಈ ಅವಕಾಶವು ಅನಿರೀಕ್ಷಿತ ಹಾಗೂ ಆಶ್ಚರ್ಯಕರವಾದ ಉಡುಗೊರೆಯಾಗಿತ್ತು.



ಗುರುಗಳು ಒಮೇಗಾ ಶಾಲೆಗೂ ಸಹ ಕೆಲವು ಬಾರಿ ಭೇಟಿ ನೀಡಿದರು. ಒಮ್ಮೆ ಹಾಸ್ಟೆಲ್‌ನ ವಿದ್ಯಾರ್ಥಿಗಳೊಂದಿಗೆ ರಾತ್ರಿಯ ಭೋಜನವನ್ನು ಮಾಡಲು, ಮತ್ತೊಮ್ಮೆ ಕ್ರಿಕೆಟ್ ಆಟವನ್ನು ವೀಕ್ಷಿಸಲು. ವಿದ್ಯಾರ್ಥಿಗಳಿಂದ ಸಮೂಹಗಾನವೊಂದನ್ನು ಆಲಿಸಿದ ಅವರು ಶಾಲೆಯಲ್ಲಿ ಇನ್ನೂ ಹೆಚ್ಚು ಹೆಚ್ಚು ಸಂಗೀತವಿರಲಿ ಎಂದು ಆಶಿಸಿದರು. ವಿದ್ಯಾರ್ಥಿಗಳನ್ನು ಕುರಿತು ಜ್ಞಾನಾರ್ಜನೆಗಿಂತ ಹೆಚ್ಚಾಗಿ ವಿವೇಕವನ್ನು ಸಂಪಾದಿಸಬೇಕೆಂದು ಗುರುಗಳು ತಮ್ಮ ಈ ಭೇಟಿಯಲ್ಲಿ ಹೇಳಿದರು. ಶಾಲೆಯು ಹಾರ್ವರ್ಡ್ ಆಗುವುದಕ್ಕಿಂತ ಆಧ್ಯಾತ್ಮಿಕವಾಗಿರಬೇಕಾದುದು ತಮಗೆ ಮುಖ್ಯ ಎಂದು ಅವರು ಹೇಳಿದರು.

ಚೆನ್ನೈನ ಅಭ್ಯಾಸಿಗಳು ಗುರುಗಳು ಅಲ್ಲಿಯೇ ಸುಮಾರು 2 ತಿಂಗಳುಗಳ ಕಾಲ









ತಂಗಿದುದಕ್ಕಾಗಿಯೂ ಹಾಗೂ ಗುರುಗಳನ್ನು ಅವರು ಆಗಾಗ ನೋಡಲು ಸಾಧ್ಯವಾಗಿದುದಕ್ಕಾಗಿಯೂ ಬಹಳ ಖುಷಿಯಾಗಿದ್ದರು. ಈಗ ಸ್ಥಳೀಯ ಅಭ್ಯಾಸಿಗಳಿಗೆ ಗುರುಗಳ ಕುಟೀರದ ಒಳಗೆ ಹೋಗುವ ಅವಕಾಶಗಳು ಬಹಳ ಸುಗಮವಾಗಿದೆ. ಆದುದರಿಂದ ಅವರಿಗೆ ಗುರುಗಳನ್ನು ಆಗಾಗ ನೋಡುವ ಅವಕಾಶಗಳೂ ಸಿಗುತ್ತದೆ ಹಾಗೂ ಕೆಲವೊಮ್ಮೆ ವಾರದ ದಿನಗಳಲ್ಲಿ ಸಂಜೆಯ ವೇಳೆ ಗುರುಗಳು ನೀಡುವ ಸತ್ಸಂಗದಲ್ಲಿ ಭಾಗವಹಿಸುವರು.

ಭಾನುವಾರದ ಸತ್ಸಂಗಗಳು ಎಲ್ಲರ ಹೃದಯಗಳಲ್ಲಿಯೂ ಸಂತೋಷವನ್ನುಂಟು ಮಾಡುತ್ತವೆ. ಭಾನುವಾರದ ಸತ್ಸಂಗದಲ್ಲಿ ಪ್ರತೀ ವಾರವೂ ಗುರುಗಳನ್ನು ನೋಡುವುದಕ್ಕಾಗಿ ಎಲ್ಲಾ ಅಭ್ಯಾಸಿಗಳು ಇಡೀ ವಾರ ಕಾತುರತೆಯಿಂದ ಕಾಯುತ್ತಿರುತ್ತಾರೆ.



ಹುಬ್ಬಳ್ಳಿ, ದಿಂಡಿಗಲ್ ಹಾಗೂ ಇತರ ಕೇಂದ್ರಗಳಿಂದ ಅಭ್ಯಾಸಿಗಳು ಗುರುಗಳನ್ನು ಭೇಟಿಮಾಡಿ ಅವರ ಗಮನ ಹಾಗೂ ಪ್ರೇಮವನ್ನು ಸ್ವೀಕರಿಸಿದರು.

ದಿವ್ಯಪ್ರೇಮಿಗಳಾದ ರಾಧಾಕೃಷ್ಣರ ಅಮೃತಶಿಲೆಯ ವಿಗ್ರಹವನ್ನು ಗುರುಗಳು ತಮ್ಮ ಕುಟೀರದ ಆಗ್ನೇಯ ದಿಕ್ಕಿನಲ್ಲಿರುವ ಒಂದು ಸುಂದರವಾದ ಮಂಟಪದಲ್ಲಿ ಪ್ರತಿಷ್ಠಾಪನೆ ಮಾಡಿದ್ದಾರೆ. ಸ್ತ್ರೀಯರ ರೂಪದಲ್ಲಿ ಇರುವ ಸದ್ಗುಣಗಳನ್ನು ಬಿಂಬಿಸುವ ವಿಗ್ರಹಗಳನ್ನು ಈಗಾಗಲೇ ಸ್ಥಳಾಂತರಿಸಲಾಗಿದೆ. ಪೂಜಾ, ಶ್ರದ್ಧಾ ಹಾಗೂ ಅರ್ಚನಾ ಈ ವಿಗ್ರಹಗಳನ್ನು ಧ್ಯಾನಮಂದಿರದ ಮುಖ್ಯ ಪ್ರವೇಶದ್ವಾರದ ಇಬ್ಬದಿಯಲ್ಲಿ ಪ್ರತಿಷ್ಠಾಪನೆ ಮಾಡಲಾಗಿದೆ ಹಾಗೂ ಗಂಗಾ ವಿಗ್ರಹವನ್ನು ಧ್ಯಾನಮಂದಿರದ ಕಡೆಗೆ ಮುಖಮಾಡಿ ರಸ್ತೆಯ ಇನ್ನೊಂದು ಬದಿಯಲ್ಲಿ ಪ್ರತಿಷ್ಠಾಪನೆ ಮಾಡಲಾಗುತ್ತದೆ.




"ಚಾರಿತ್ರ್ಯ ನಿರ್ಮಾಣ ಕುರಿತ ಸಭೆ"ಯೊಂದನ್ನು ಅಕ್ಟೋಬರ್ 9 ರಿಂದ 12 ರವರೆಗೆ ಚೆನ್ನೈ ಆಶ್ರಮದಲ್ಲಿ ಆಯೋಜಿಸಲಾಗಿತ್ತು. ಇದರಲ್ಲಿ ಭಾರತದ ಸಂಸ್ಥೆಯ ಕಾರ್ಯನಿರ್ವಾಹಕರು, ಕಾರ್ಯಕಾರಿ ಮಂಡಳಿಯ ಸದಸ್ಯರು, ವಲಯ ಮುಖ್ಯಸ್ಥರು, ವಿವಿಧ ಕೇಂದ್ರದ ಕೇಂದ್ರ ಮುಖ್ಯಸ್ಥರು ಹಾಗೂ ಇತರ ಕಾರ್ಯನಿರ್ವಾಹಕರೂ ಸೇರಿದಂತೆ ಸುಮಾರು 100 ಜನ ಭಾಗವಹಿಸಿದರು.



ಕಾರ್ಯನಿರ್ವಾಹಕರಿಗಾಗಿ "ಇತರರಲ್ಲಿ ಬದಲಾವಣೆಯನ್ನು ತರುವ ಮೊದಲು ನೀವು ಬದಲಾಗಬೇಕು" ಎನ್ನುವ ಗುರುಗಳು ಘೋಷಣೆ ಸ್ಪಷ್ಟವಾಗಿದ್ದಿತು. 9 ರ ಸಂಜೆ ಕಾರ್ಯಕ್ರಮದ ಪ್ರತಿನಿಧಿಗಳು ಬಂದಿಳಿದಾಗ ಇದ್ದಕ್ಕಿದ್ದಂತೆ ಗುರುಗಳು ಅವರೊಂದಿಗೆ ರಾತ್ರಿಯ ಭೋಜನವನ್ನು ಮಾಡಲು ನಿರ್ಧರಿಸಿದರು. ಈ ವಿಶೇಷಕಾರ್ಯಕ್ರಮದ ಬಗ್ಗೆ ಅವರು ಉದ್ವೇಗಗೊಂಡಂತೆ ಕಂಡರು. ಹಾಗೂ ಅವರು ಹೇಳಿದರು "ನಾನು ಭಾಗವಹಿಸುತ್ತಿರುವವರ ಮನಸ್ಸಿನಲ್ಲಿ ಗೊಂದಲವನ್ನುಂಟು ಮಾಡಲು ಬಯಸುತ್ತೇನೆ, ಏಕೆಂದರೆ ಗೊಂದಲದಿಂದ ಸ್ಪಷ್ಟತೆಯುಂಟಾಗುತ್ತೆ".

ಇದಕ್ಕೆ ಸತ್ಯವೆಂಬಂತೆ ಉದ್ಘಾಟನೆ ಭಾಷಣದಲ್ಲಿ ಗುರುಗಳು ವೇದ, ಮಹಾಭಾರತ, ಭಗವದ್ಗೀತೆ, ರಾಮಾಯಣ ಮುಂತಾದವುಗಳಲ್ಲಿ ನಮ್ಮ ನಂಬಿಕೆಗಳನ್ನು ಪ್ರಶ್ನಿಸಿದರು. ಹಾಗೂ ನೈತಿಕತೆ ಹಾಗೂ ಚಾರಿತ್ರ್ಯಕ್ಕೆ ಸಂಬಂಧಿಸಿದಂತೆ ನಮ್ಮಲ್ಲಿ ಗೊಂದಲವನ್ನುಂಟು ಮಾಡುವ ಅವುಗಳಲ್ಲಿರುವ ಕೆಲವು ವಿರೋಧಾತ್ಮಕ ವಿಷಯಗಳನ್ನು ಎತ್ತಿ ತೋರಿಸಿದರು. ನಾವೆಲ್ಲರೂ ನಮ್ಮ ಹೃದಯದೆಡೆಗೆ ಹಿಂತಿರುಗಬೇಕು, ಮತ್ತಿನ್ನೇನೂ ಇಲ್ಲ ಎಂದು ನಿರ್ಣಾಯಕವಾಗಿ ಹೇಳಿದರು. ಆನಂತರ ಅವರು ಅನೇಕ ವಿಷಯಗಳನ್ನು ತಮ್ಮ ಭಾಷಣಗಳಲ್ಲಿ ನಿರ್ಮೂಲನೆ ಮಾಡಿದ್ದಾರೆಂದು ಹೇಳಿದಾಗ "ಯಾರು ಯೋಚಿಸುತ್ತಾರೋ, ಅವರು ಧೈರ್ಯಮಾಡುತ್ತಾರೆ, ಯೋಚಿಸುವುದರಲ್ಲಿ ನಾವು ಧೈರ್ಯವಂತರಾಗಿರಬೇಕು".



ಭಾಷಣಕಾರರು ಚಾರಿತ್ರ್ಯದ ವಿಷಯವನ್ನು ವಿವಿಧ ಕೋನಗಳಲ್ಲಿ ವ್ಯಕ್ತಪಡಿಸಿದರು. ಯೋಗದ ದೃಷ್ಟಿಕೋನದಲ್ಲಿ (ಸೋ. ಕೆ.ಎಸ್.ಬಾಲಸುಬ್ರಮಣ್ಯಂ), ಲಾಲಾಜಿ ಮಹಾರಾಜರ ಬೋಧನೆಗಳು (ಸೋ.ಸಂತೋಷ್ ಶ್ರೀನಿವಾಸನ್), ಶಿಕ್ಷಣದಲ್ಲಿ ಮೌಲ್ಯಗಳು (ಸೋ. ಭವಾನಿ ಶಂಕರ್), ವ್ಯವಹಾರದಲ್ಲಿ ಚಾರಿತ್ರ್ಯದ ಪಾತ್ರ (ಸೋ. ಪ್ರಮೋದ್ ಸದಾರ್‌ಜೋಷಿ), ನೈತಿಕತೆಯಲ್ಲಿ ಅದರ ಪ್ರಕಟನೆ (ಸೋ. ಪಿ.ಆರ್.ಕೃಷ್ಣ) ಮತ್ತು ಮನೋಭಾವದಲ್ಲಿ (ಸೋ. ಕ್ಯಾಪ್ಟನ್ ಚಕ್ರಪಾಣಿ) ಮತ್ತು ಹತ್ತು ನಿಯಮಗಳ ಬೋಧನೆಗಳು (ಸೋ.ಪ್ರಕಾಶ್). ಭಾಗವಹಿಸಿದವರೆಲ್ಲರೂ ಹತ್ತು ಗುಂಪುಗಳಾಗಿ ಪ್ರತ್ಯೇಕಗೊಂಡು ಸಂಬಂಧಿಸಿದ ವಿಷಯಗಳನ್ನು ಚರ್ಚಿಸಿದರು. ಹಾಗೂ ಸಮಸ್ತ ಸಭೆಯ ಮುಂದೆ ಅದನ್ನು ಪ್ರಸ್ತುತಪಡಿಸಿದರು.

12 ರಂದು ಸೋ. ಅನುರಾಧ ಭಾಟಿಯಾರವರು ಸಭೆಯ ಸಾರಾಂಶವನ್ನು ತಿಳಿಸಿದ ನಂತರ, ಗುರುಗಳು ತಮ್ಮ ಮುಕ್ತಾಯ ಭಾಷಣದಲ್ಲಿ ತಮ್ಮ ಹಿಂದಿನ ಆದರ್ಶಸೂತ್ರವನ್ನೇ ಪಾಲಿಸುತ್ತಾ ನಮ್ಮ ಚಾರಿತ್ರ್ಯ ಹಾಗೂ ಮನೋಭಾವಗಳನ್ನು ನಿಶ್ಚಿತವಾಗಿ ಯಾವ ಯಾವ ಕ್ಷೇತ್ರಗಳಲ್ಲಿ ಸುಧಾರಿಸಿಕೊಳ್ಳಬೇಕೆಂದು ಒತ್ತಿ ಹೇಳಿದರು.

- ❖ನಮ್ಮ ಸರ್ವೇಸಾಮಾನ್ಯ ಶಿಷ್ಟಾಚಾರ ಹಾಗೂ ನಡವಳಿಕೆಗಳಲ್ಲಿ ನಾವು ಬದಲಾಗಬೇಕು.
- ❖ವೈಯಕ್ತಿಕವಾದ ವೇದನೆಯಿಲ್ಲದೆ, ಆಧ್ಯಾತ್ಮಿಕ ಪ್ರಗತಿ ಸಾಧ್ಯವಿಲ್ಲ. ಆದುದರಿಂದಲೇ ನಾವು ನಮ್ಮ ಸಂಸ್ಥೆಯಲ್ಲಿ ಅಭ್ಯಾಸಿಗಳಿಗೆ ಸುಖ ಸಾಧನೆಗಳನ್ನು ಒದಗಿಸುವುದಿಲ್ಲ ಎಂದು ಬಾಬೂಜಿಯವರು ಹೇಳುತ್ತಿದ್ದರು.
- ❖ನೈತಿಕತೆಯ ಅವನತಿಯು ಏಡ್ಸ್‌ನಂತಹ ರೋಗಗಳನ್ನು ಹುಟ್ಟುಹಾಕಿವೆ. ಪಶ್ಚಿಮದಲ್ಲಿ 'ಗುಳಿಗೆ' ಎನ್ನುವ ಒಂದೇ ಒಂದು ಅಂಶವು ಗಂಡು–ಹೆಣ್ಣಿನ ಸಂಬಂಧದ ನೈತಿಕತೆಯನ್ನೇ ನಾಶಮಾಡಿದೆ.
- ❖ನಮ್ಮ ಚಾರಿತ್ರ್ಯ ನಿರ್ಮಾಣದಲ್ಲಿ ಆಸೆ ಎಂಬ ಅಂಶವು ನಮ್ಮ ಪ್ರಯತ್ನಗಳಿಗೆ ಅಡ್ಡಿಯಾಗುತ್ತದೆ ಹಾಗೂ ಅದು ನಮ್ಮ ಸಂಕಲ್ಪ ಶಕ್ತಿಯನ್ನು ನಾಶಮಾಡುತ್ತದೆ ಎಂಬುದನ್ನು ಭಾಷಣಕಾರರು ಒತ್ತಿ ಹೇಳಬೇಕು.
- ❖ಯಾರು ಪ್ರಪಂಚಕ್ಕೆ ಏನನ್ನೂ ಕೊಡುಗೆಯಾಗಿ ನೀಡಿಲ್ಲವೋ ಹಾಗೂ ಕೇವಲ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದರಲ್ಲಿಯೇ ಆಸಕ್ತನಾಗಿದ್ದಾನೋ ಅವನು 'ಅನೀತಿವಂತ'.
- ❖ನಿಮ್ಮಲ್ಲಿ ಅಗತ್ಯಕ್ಕಿಂತ ಒಂದು ರೂಪಾಯಿ ಹೆಚ್ಚಿದ್ದರೆ ನೀವು ಹಾದಿತಪ್ಪುವ ಸಾಧ್ಯತೆಗಳಿವೆ, ನಮ್ಮಲ್ಲಿ ಅನೇಕ ಅಭ್ಯಾಸಿಗಳು ತಮ್ಮ ಅತಿಯಾದ ಹಣದಾಸೆಯಿಂದ ಇಂದು ಸಂಕಷ್ಟದಲ್ಲಿದ್ದಾರೆ ಹಾಗೂ ಅತಿಯಾದ ನಷ್ಟ ಹೊಂದಿದ್ದಾರೆ.
- ❖ಭಾರತದಲ್ಲಿ ಲೈಂಗಿಕ ನೈತಿಕತೆಗೆ ಅತಿಯಾದ ಪ್ರಾಧಾನ್ಯವಿದೆ ಹಾಗೂ ಇನ್ನಿತರ ಅನೈತಿಕತೆಗಳಿಗೆ ಸಡಿಲವಾದ ಮನೋಭಾವವಿದೆ.
- ❖ಸಂಸ್ಥೆಯ ಶುದ್ಧರಕ್ತನಾಳಗಳಾಗಿರುವ ಪ್ರಶಿಕ್ಷಕರು ಸೋಮಾರಿತನವನ್ನು ತೊರೆಯ ಬೇಕಾಗಿದೆ ಹಾಗೂ ತಮ್ಮ ಕೆಲಸದಲ್ಲಿ ಗುರುಗಳಲ್ಲಿ ಶ್ರದ್ಧೆಯನ್ನು ಹೊಂದಬೇಕಾಗಿದೆ.

ಸಭೆಯ ಸಂಯೋಜನೆಯನ್ನು ಸಹೋದರ ರಾಜೇಶ್ ರಾಥೋಡ್‌ರವರು ಹಾಗೂ ಇತರ ವ್ಯವಸ್ಥೆಗಳನ್ನು ಆಶ್ರಮ ನಿರ್ವಾಹಕರಾದ ಸೋ. ಸತ್ಯನಾರಾಯಣ ಅವರನ್ನು ಅತ್ಯುತ್ತಮ ರೀತಿಯಲ್ಲಿ ಮಾಡಿದ್ದರು. ಗುರುಗಳ ಅತ್ಯಂತ ಪರಿಣಾಮಕಾರಿಯಾದ ಭಾಷಣಗಳಿಂದ, ಸ್ವ ಅವಲೋಕನದಲ್ಲಿ ಸಮಯ ಕಳೆದಿದ್ದರಿಂದ ಹಾಗೂ ಪ್ರತಿಸ್ಪಂದನಗಳಿಂದ ಖಂಡಿತವಾಗಿಯೂ ಇದು ಭಾಗವಹಿಸಿದವರಿಗೆ ಕರೆಗಂಟೆಯಾಗಿದೆ.

ಪ್ರತಿಯೊಂದು ಕಾರ್ಯಕ್ರಮವನ್ನು ಗುರುಗಳು ಉತ್ಸುಕತೆಯಿಂದ ವೀಕ್ಷಿಸುತ್ತಿದ್ದ, ಆಲಿಸುತ್ತಿದ್ದ ಈ ಸಭೆಯು ಒಟ್ಟಿಗೆ ಹೇಳಬೇಕೆಂದರೆ ಹೃದಯ ಮತ್ತು ಮನಸ್ಸುಗಳಿಗೆ ತೀವ್ರವಾದ ವ್ಯಾಯಾಮವಾಗಿತ್ತು.

'ಓಶಿಯಾನಾ ಮತ್ತು ಲ್ಯಾಟಿನ್–ಅಮೇರಿಕಾದ ಸಭೆ'ಯು ಅಕ್ಟೋಬರ್ 14ರಿಂದ 19ರವರೆಗೆ ಜರುಗಿತು. ಗುರುಗಳು ಉದ್ಘಾಟನಾ ಭಾಷಣವನ್ನು ಮಾಡಿದರು ಮತ್ತು ಮಣಪಾಕ್ಕಂಗೆ ಬರುವುದು 'ತವರುಮನೆಗೆ ಬಂದಂತೆ' ಎನ್ನುತ್ತಾ ಅದನ್ನು 'ಆಧ್ಯಾತ್ಮಿಕ ಗೃಹ'ಕ್ಕೆ ಹೋಲಿಸಿದರು. "ನಮ್ಮ ಹೃದಯಗಳನ್ನು ಬೆಳೆಸಿಕೊಳ್ಳುವುದಕ್ಕಾಗಿ, ಶುದ್ಧ ಮಾಡಿಕೊಳ್ಳುವುದಕ್ಕಾಗಿ, ಸುಸಂಸ್ಕೃತಗೊಳಿಸುವುದಕ್ಕಾಗಿ ಹಾಗೂ ಪ್ರೀತಿಯ ಸಾಧನವಾದ ಅದರಲ್ಲಿ ಅದರ ನೈಜ ಗುಣಗಳನ್ನು ತುಂಬಿಕೊಳ್ಳುವುದಕ್ಕಾಗಿ, ಅದರಿಂದ ಮಾನವೀಯ ಗುಣಗಳಾದ ದಯೆ, ಕರುಣೆ, ಇತರರ ಶುಶ್ರೂಷೆ ಮಾಡುವುದು, ಇತರರೊಂದಿಗೆ





ಹಂಚಿಕೊಳ್ಳುವುದು. ಹಾಗೂ ಇತರರೊಂದಿಗೆ ಸಾಮರಸ್ಯದಿಂದ ಬಾಳುವುದನ್ನು ಪ್ರಕಟಣೆಗೊಳಿಸುವುದು, ಇವೆಲ್ಲವೂ ಇತ್ತೀಚಿನ ದಿನಗಳಲ್ಲಿ ವಾಸ್ತವವಾಗಿ ಅಸ್ತಿತ್ವದಲ್ಲಿಯೇ ಇಲ್ಲ. ಈ ಏಕಮೇವ ಉದ್ದೇಶದಿಂದ ನಾವು ಇಲ್ಲಿ ಬಂದಿದ್ದೇವೆ" ಎಂದು ಹೇಳಿದರು.

ಆರು ದಿನಗಳಲ್ಲಿ ಐದು ದಿನ ಗುರುಗಳು ಬೆಳಗಿನ ಸತ್ಸಂಗವನ್ನು ನಡೆಸಿಕೊಟ್ಟರು. ಕೆಲವು ವಿವಾಹಗಳೂ ಜರುಗಿದವು. "ವೈವಿಧ್ಯತೆಯಲ್ಲಿ ಏಕತೆ" ಎಂಬ ವಿಷಯವನ್ನು ಕುರಿತು ಸೋ. ಪಿ.ಆರ್. ಕೃಷ್ಣ ಅವರು ಹಾಗೂ "ಅವರು ಮತ್ತು ನಾನು" ಎಂಬ ವಿಷಯವಾಗಿ ಸಹೋದರ ಸಂತೋಷ್ ಖಾಂಜೀಯವರು ಮಾತನಾಡಿದರು.

ಸಂಜೆಯ ವೇಳೆಯಲ್ಲಿ ಗುರುಗಳು ಅಭ್ಯಾಸಿಗಳನ್ನು ಸಣ್ಣ ಸಣ್ಣ ಗುಂಪಿನಲ್ಲಿ ಒಂದಾದ ಮೇಲೆ ಒಂದರಂತೆ ಅವರ ಕುಟೀರದಲ್ಲಿ ಭೇಟಿ ಮಾಡಿದರು ಹಾಗೂ ಅವರೊಂದಿಗೆ ಸಂಭಾಷಣೆ ಮಾಡುತ್ತಾ ಹೆಚ್ಚಿನ ಸಮಯವನ್ನು ಕಳೆದರು. ನ್ಯೂಜಿಲ್ಯಾಂಡ್ ಹಾಗೂ ಆಸ್ಟ್ರೇಲಿಯಾದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಹ ಅವರು ಪಾಲ್ಗೊಂಡರು. ಸುಮಾರು 500 ಅಭ್ಯಾಸಿಗಳಿದ್ದರು, ಅದರಲ್ಲಿ ಲ್ಯಾಟಿನ ಅಮೇರಿಕಾದ 100 ಜನ, ಲಾ. ರಿಯೂನಿಯನ್‌ನಿಂದ 15 ಜನ, ಉಳಿದವರು ಓಶಿಯಾನಾದ ಅಭ್ಯಾಸಿಗಳಾಗಿದ್ದರು.

ಗುರುಗಳು ಪ್ರತಿದಿನವೂ ಸತ್ಸಂಗವನ್ನು ನಡೆಸಿಕೊಟ್ಟರು. ಅವರು ಪ್ರಾರಂಭಿಕ ಹಾಗೂ ಮುಕ್ತಾಯ ಭಾಷಣಗಳನ್ನು ನೀಡಿದರು.

## ಸ್ವಯಂಸೇವಕರ ಸಭೆ, ಮಧ್ಯಪ್ರದೇಶ.

ಆಗಸ್ಟ್ 22ರಂದು ಜಬ್ಬಲ್‌ಪುರದ ಆಶ್ರಮದಲ್ಲಿ ಮಧ್ಯಪ್ರದೇಶ ವಲಯದ ಎಲ್ಲಾ SMRTI ಸ್ವಯಂಸೇವಕರಿಗೆ ಸಭೆಯೊಂದನ್ನು ಆಯೋಜಿಸಲಾಗಿತ್ತು. ಸುಮಾರು 45 ಸ್ವಯಂ ಸೇವಕರು ಸಭೆಯಲ್ಲಿ ಭಾಗವಹಿಸಿದರು. ಇಂದೋರ್, ಭೂಪಾಲ್, ಜಬ್ಬಲ್‌ಪುರ್, ಉಜ್ಜೈನ್‌ನಂತಹ ದೊಡ್ಡ ಕೇಂದ್ರಗಳಿಂದಷ್ಟೇ ಅಲ್ಲದೆ ಬಾಲಘಾಟ್, ಟಿಕಮ್‌ಗಢ್, ಜವೋರ, ಸುಹಾಗ್‌ಪುರ್, ಗೈರಾನ್‌ಪುರ್, ಟ್ಯೂಂಡಾ, ಗಂಜ್‌ಬಸೋಡಾ, ಇತಾನಿ, ರೇವಾ, ಸತ್ನುಲ್ಲಾಗಂಜ್ ಇನ್ನೂ ಇತರ ಸಣ್ಣ ಹಾಗೂ ದೂರದ ಕೇಂದ್ರದ ಸ್ವಯಂಸೇವಕರೂ ಸಹ ಭಾಗವಹಿಸಿದರು. ಈ ರೀತಿಯ ವಲಯ ಮಟ್ಟದ ಸಭೆಯನ್ನು ಇದೇ ಮೊಟ್ಟಮೊದಲಬಾರಿಗೆ ಆಯೋಜಿಸಲಾಗಿತ್ತು. ಆದುದರಿಂದಲೇ ಎಲ್ಲರೂ ಬಹು ಉತ್ಸಾಹ ದಿಂದ ಹಾಗೂ ಚಟುವಟಿಕೆಯಿಂದಿದ್ದರು.

ಸಹೋದರ ರಾಜೇಶ ರವೇರ್ಕರ್‌ರವರು ಭಾಗವಹಿಸಿದವರೆಲ್ಲರನ್ನೂ ಸ್ವಾಗತಿಸಿದರು. ನಂತರ ಎಲ್ಲರೂ ತಮ್ಮ ಕಿರುಪರಿಚಯವನ್ನು ಮಾಡಿಕೊಂಡರು. ಸಹೋದರ ವಿನೋದ್‌ರವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಹಾಗೂ "ದಿವ್ಯಲೋಕದ ಪಿಸುಮಾತುಗಳು" ಗ್ರಂಥದಿಂದ ಸಂದೇಶವೊಂದನ್ನು ಎಲ್ಲರೊಂದಿಗೂ ಹಂಚಿಕೊಂಡರು.

ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಿದ ನಂತರ VBSEಯ ಅನೇಕ ವಿಷಯಗಳನ್ನು ಚರ್ಚಿಸಲಾಯಿತು. ಪ್ರತೀ ಕೇಂದ್ರವೂ (ಕಡೇ ಪಕ್ಷ) ಒಂದು ಶಾಲೆಯನ್ನಾದರೂ ಆಯ್ದುಕೊಂಡು ಅಲ್ಲಿ ಸರಿಯಾದ ಪ್ರಯತ್ನಗಳಿಂದ VBSEಯನ್ನು ಕಾರ್ಯಗತಗೊಳಿಸುವ ನಿರ್ಧಾರವನ್ನು ಕೈಗೊಂಡರು. ಯುವ ಜನರಿಗಾಗಿ ಇನ್ನೂ ಹೆಚ್ಚು ಹೆಚ್ಚು ಚಟುವಟಿಕೆಗಳನ್ನು ಆಯೋಜಿಸಬೇಕೆಂದೆನಿಸಿತು. ಸಂಪರ್ಕದಲ್ಲಿರುವ, ಭಾತೃತ್ವದ ಹಾಗೂ ಪ್ರೇಮದ ಭಾವನೆಗಳನ್ನು ಭಾಗವಹಿಸಿದ ಎಲ್ಲರೂ ಅನುಭವಿಸಿದರು.

### ಹೊಸ ನೇಮಕಾತಿ

ನವೆಂಬರ್ 1, 2010ರಿಂದ ಜಾರಿಯಾಗುವಂತೆ ಸೋ. ಯು.ಪಿ. ಧವನ್‌ರವರನ್ನು ಖರಗ್‌ಪುರ ಕ್ರೆಸ್ಟ್‌ನ ಉಪ ನಿರ್ದೇಶಕರನ್ನಾಗಿ ನೇಮಿಸಲಾಗಿದೆ.

# ಗತಕಾಲಕ್ಕೊಂದು ಇಣುಕುನೋಟ.

1976ರ ಮೇ ಹಾಗೂ ಜೂನ್ ಮಧ್ಯದ ಅವಧಿಯಲ್ಲಿ ಬಾಬೂಜಿಯವರ ಯೂರೋಪ್ ಪ್ರವಾಸದಲ್ಲಿ ಗುರುಗಳು ಅವರೊಂದಿಗಿದ್ದರು. ಈ ಪ್ರವಾಸದಲ್ಲಿ ಅವರು ಡೆನ್ಮಾರ್ಕ, ಜರ್ಮನಿ, ಸ್ವಿಡ್ಜರ್‌ಲ್ಯಾಂಡ್, ಫ್ರಾನ್ಸ್ ಹಾಗೂ ಇಟಲಿ ದೇಶಗಳಿಗೆ ಭೇಟಿ ನೀಡಿದರು. ಈ ಪ್ರವಾಸದ ಸಂಪೂರ್ಣ ಮಾಹಿತಿಯನ್ನು ಈ ಮೊದಲು "ಸಹಜ್‌ಮಾರ್ಗ್ ಇನ್ ಯೂರೋಪ್" ಎಂಬ ಪುಸ್ತಕದಲ್ಲಿ ಮುದ್ರಿಸಲಾಗಿತ್ತು. ನಂತರ ಈ ಪುಸ್ತಕವು "ಯಾತ್ರಾ (ಸಂಪುಟ–2 )" ಎಂಬ ಶೀರ್ಷಿಕೆಯಲ್ಲಿ ಪುನಃ ಮುದ್ರಣವಾಗಿತ್ತು.

ಗುರುಗಳು ದಾಖಲು ಮಾಡಿರುವ ಮುಖ್ಯಾಂಶಗಳು, ಗುರುಗಳು ಅವರ ಪ್ರೀತಿಯ ಬಾಬೂಜಿಯವರ ಮೇಲೆ ತೋರಿದ ಪ್ರೇಮ ಸಿಂಚನದ ಶುಶ್ರೂಷೆ, ಸಂಸ್ಥೆಯ ವಿವಿಧ ವಿಷಯಗಳಲ್ಲಿ ಅವರು ದಣಿಯದೆ ಪಾಲ್ಗೊಳ್ಳುವುದು, ದಿನಕ್ಕೆ 15 ಕ್ಕಿಂತಲೂ ಅಧಿಕ ಬೈಠಕ್‌ಗಳನ್ನು ನಿಯಮಿತವಾಗಿ ನೀಡುವುದು, ಅದರ ಜೊತೆಜೊತೆಯಲ್ಲೇ ಭಾಷಣಗಳನ್ನು ನೀಡುವುದು ಹಾಗೂ ಗುರು – ಶಿಷ್ಯರ ಆಧ್ಯಾತ್ಮಿಕತೆಯು ಅತ್ಯುನ್ನತವಾದ ಪ್ರತಿಸ್ಪಂದನ ಇವೆಲ್ಲವೂ ಅವರಿಬ್ಬರ ಸಂಬಂಧದ ಭಾವನೆಗಳ ವಿಶಾಲವ್ಯಾಪ್ತಿಯನ್ನು ಪ್ರತಿಬಿಂಬಿಸುತ್ತವೆ.

### ಬಾಬೂಜಿಯವರ ಈ ಪ್ರವಾಸದಿಂದ ಆಯ್ದ ಕೆಲವು ಮುತ್ತುಗಳು ಇಂತಿವೆ.

*ತತ್ವಜ್ಞಾನ ಯೋಜಿಸುವ ವಿಧಾನವಾಗಿದೆ; ಯೋಗವು ಮಾಡುವ ವಿಧಾನವಾಗಿದೆ; ಹಾಗೂ ಸಾಕ್ಷಾತ್ಕಾರವು ಏನನ್ನೂ ಮಾಡದ ವಿಧಾನವಾಗಿದೆ".

ಪ್ರಶ್ನೆ: ನಿಮ್ಮ ಸಂದೇಶವೇನು?
ಬಾಬೂಜೀ: ಎಲ್ಲೆಡೆಯೂ ಶಾಂತಿ ನೆಲೆಸಲಿ ಹಾಗೂ ಆಲೋಚನೆಯಲ್ಲಿ ವಿರೋಧವಿರಬಾರದು.

ಪ್ರಶ್ನೆ: ಜೀವನವೆಂದರೇನು?
ಬಾಬೂಜೀ: ಜೀವನದೊಳಗಿನ ಜೀವನವು ನಿಜವಾದ ಜೀವನ.

ಸೂಫಿ ಕವಿಗಳಾದ ಸರ್ಮಾಡ್‌ರವರ ಒಂದು ಚೌಪದಿಯನ್ನು ಉಲ್ಲೇಖಿಸುತ್ತಾ ಬಾಬೂಜಿಯವರು ಹೇಳುತ್ತಾರೆ;
"ಪ್ರೇಮದ ನೋವು ಪತಂಗದಂತೆ,
ಗಾಳಿಯ ಮೇಲೆ ತೇಲುತ್ತದೆ,
ಯಾವುದೇ ಗುರುಇಲ್ಲದೆ ಅತ್ತ–ಇತ್ತ ಹಾರಾಡುತ್ತದೆ,
ಆದರೆ ಪತಂಗವು ಬೆಂಕಿಯಲ್ಲಿ ತನ್ನನ್ನೇ ತಾನು ಆಹುತಿ ಮಾಡಿಕೊಳ್ಳುತ್ತದೆ."

ತದನಂತರ ಈ ಮುಂದಿನದನ್ನು ಹೇಳುತ್ತಾರೆ. "ನಮ್ಮ ಪ್ರೇಮವು ಆ ರೀತಿ ಇರಬೇಕು. ಭಗವಂತನನ್ನು ನಮ್ಮ ಹೃದಯದೊಳಕ್ಕೆ ಕರೆದುಕೊಳ್ಳಲು ಸಾವಿರ ವರ್ಷಗಳೇ ತೆಗೆದುಕೊಳ್ಳುತ್ತದೆ ಮತ್ತು ಕೆಲವೇ ಜನರು ಅದನ್ನು ಪಡೆಯಲು ಶಕ್ತರಾಗಿದ್ದಾರೆ. ನೀನು ಸಾಯುವುದಕ್ಕಿಂತ ಮುನ್ನವೇ ಸಾಯುವುದೊಂದೇ ದಾರಿ".

"ನರಕವೆಂಬುದು ಪಾಪಿಗಳಿಗೆ, ಸ್ವರ್ಗವೆಂಬುದು ಮೂರ್ಖರಿಗೆ, ಆದರೆ ದಿವ್ಯಲೋಕವೆಂಬುದು ಮುಕ್ತಿಯನ್ನು ಪಡೆದ ಆತ್ಮಗಳಿಗಾಗಿ ಎಂಬುದು ನನ್ನ ಸಂಶೋಧನೆ."



## ಮಣಪಾಕ್ಕಂಗೆ ಜಪಾನಿನ ಸಂದರ್ಶಕರು.

### ಒಂದು ಹೃದಯಂಗಮವಾದ ಪ್ರತಿಸ್ಪಂದನ.



ಸೆಪ್ಟೆಂಬರ್ 9 ರಂದು ಜಪಾನಿನ ಯೋಗ ಸಂಘದ 50 ಸದಸ್ಯರ ಅವರ ಅಧ್ಯಕ್ಷರಾದ ಸೆನ್‌ಸೇಯ್ ಟಹಾರಾ ಹೋಡೋ ಹಾಗೂ ಉಪಾಧ್ಯಕ್ಷರಾದ ಶ್ರೀಮತಿ ಒಗಿಯಾಮ ಕಿಮಕೋ ಅವರೊಂದಿಗೆ ಚೆನ್ನೈ ಆಶ್ರಮದಲ್ಲಿ ಕೆಲವು ಗಂಟೆಗಳ ಕಾಲ ಸಮಯ ಕಳೆದರು. ಆಶ್ರಮ ನಿರ್ವಾಹಕರಾದ ಸೋ. ಸತ್ಯನಾರಾಯಣ ಅವರು ಎಲ್ಲರಿಗೂ ಆಶ್ರಮವನ್ನು ಸಂಪೂರ್ಣವಾಗಿ ತೋರಿಸಿದರು ಮತ್ತು ಅವರನ್ನು 'ಡಿ' ಬ್ಲಾಕ್‌ನಲ್ಲಿರುವ ಒಂದು ಕೊಠಡಿಗೆ ಕರೆದೊಯ್ಯಲಾಯಿತು. ಅಲ್ಲಿ ಅವರಿಗೆ ಕೈಪಿಡಿಗಳನ್ನು, ಜಪಾನಿನ ಪ್ರಶಿಕ್ಷಕರ ಹೆಸರು ಮತ್ತು ಸತ್ಸಂಗದ ಸ್ಥಳಗಳ ಮಾಹಿತಿಗಳನ್ನು ಒದಗಿಸಲಾಯಿತು.

ಜಪಾನ್‌ನ ನಯಾಂಗಾದಾ ಪ್ರಶಿಕ್ಷಕರೊಂದಿಗೆ ಹಾಗೂ ಕಾರ್ಯನಿರ್ವಾಹಕರೊಂದಿಗೆ ಅಂತರ್ಜಾಲದ ಮೂಲಕ ಸಂಪರ್ಕವನ್ನು ಕಲ್ಪಿಸಿ ದೂರಸಂಪರ್ಕದ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಯಿತು. ಸೋ. ನಿತ್ಯಾ ಶ್ರೀರಾಮ್‌ರವರು ಸಭೆಯನ್ನುದ್ದೇಶಿಸಿ ಸಹಜಮಾರ್ಗದ ಬಗ್ಗೆ ಜಪಾನ್ ಭಾಷೆಯಲ್ಲಿ ಮಾತನಾಡಿದರು. ರಾಷ್ಟ್ರೀಯ ಮುಖ್ಯಸ್ಥರಾದ ಸೋ. ಶ್ರೀರಾಮ್‌ರವರು ಜಪಾನ್ ಭಾಷೆಯಲ್ಲಿ ತಮ್ಮ ಕಿರುಪರಿಚಯ ಮಾಡಿಕೊಂಡರು. ನಂತರ ಸಹೋದರಿಯರಾದ ಎರೀನಾ ನಕಾಮುರಾ, ಕ್ಲಾರಿನ್ನಾ ಬೆಗ್ ಹಾಗೂ ಸಹೋದರ ಕ್ಯಾನೇ ಅವರು ಪದ್ಧತಿ ಹಾಗೂ ಸಂಸ್ಥೆಯನ್ನು ಕುರಿತು ಮಾತನಾಡಿದರು.ಜಪಾನಿ ಭಾಷೆಯಲ್ಲಿದ್ದ ಈ ಪರಿಚಯ ಕಾರ್ಯಕ್ರಮದ ಪ್ರದರ್ಶನವನ್ನು ಎಲ್ಲರೂ ಚಪ್ಪಾಳೆ ಹಾಕುತ್ತಾ ಬಹಳವಾಗಿ ಮೆಚ್ಚಿಕೊಂಡರು. 2–3 ಜನರನ್ನು ಹೊರತುಪಡಿಸಿ ಎಲ್ಲರೂ ಯೋಗ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಮಹಿಳೆಯರಾಗಿದ್ದರು.

ನಂತರ ಸೋ.ದೊರೈಯವರು ಮಾತನಾಡಿದರು ಮತ್ತು ಮಾರ್ಗದರ್ಶಕರಾಗಿದ್ದ ಶ್ರೀ.ಮಾರ್ಕನ್ (ಗುಂಪಿನ ನಿರ್ವಾಹಕರಲ್ಲೊಬ್ಬರಾದ ಟೋಕಿಯೋ ಮೂಲದ ಭಾರತೀಯ) ಅದನ್ನು ಜಪಾನ್ ಭಾಷೆಗೆ ಭಾಷಾಂತರ ಮಾಡಿದರು. 80 ವಯೋಮಾನದ ಸೆನ್‌ಸಯ್‌ರವರು ಬಹಳವಾಗಿ ಮೆಚ್ಚಿಕೊಂಡರು ಹಾಗೂ ಅವರು ಅನೇಕ ವರ್ಷಗಳ ಹಿಂದೆಯೇ ನಮ್ಮ ಆಶ್ರಮವು ತೆಂಗಿನ ಗರಿಯ ರಚನೆಯಾಗಿದ್ದಾಗಲೇ ಭೇಟಿ ನೀಡಿದ್ದರೆಂದರು.

ಜಪಾನ್‌ನಲ್ಲಿರುವ ನಮ್ಮ ಸಂಸ್ಥೆಯ ಸೇವೆಯನ್ನು ಅವರು ಉಚಿತವಾಗಿ ಪಡೆಯಬಹುದೆಂದು ತಿಳಿಸಲಾಯಿತು. ಟೀ ಹಾಗೂ ಲಘು ಆಹಾರವನ್ನು ತೆಗೆದುಕೊಂಡ ನಂತರ ಸಂಜೆ 6.30 ಕ್ಕೆ ಅವರು ಜಪಾನ್‌ಗೆ ಹಿಂತಿರುಗಲು ವಿಮಾನ ನಿಲ್ದಾಣದತ್ತ ಪ್ರಯಾಣ ಬೆಳೆಸಿದರು.



# ತಮಿಳು ನಾಡು ದಕ್ಷಿಣ ವಲಯ ಒಂದು ಹೊಸ ಪ್ರೇರಣೆ.

ಸೋ.ಎ.ಪಿ.ದೊರೈಯವರು ಸೆಪ್ಟೆಂಬರ್ 3 ರಿಂದ 6ರವರೆಗೆ ಕನ್ಯಾಕುಮರಿ ಹಾಗೂ ತಿರುನೆಲ್‌ವೆಲ್ಲಿ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಲ್ಲಿ ಸಂಸ್ಥೆಯ ಬೆಳವಣಿಗೆಗೆ ಒಂದು ನವ ಚೈತನ್ಯವನ್ನು ತುಂಬುವ ಉದ್ದೇಶದಿಂದ ಪರ್ಯಟನೆ ಮಾಡಿದರು. ಸಂಸ್ಥೆಯ ಬೆಳವಣಿಗೆಯನ್ನು ಪರಿಶೋಧನೆ ಮಾಡುವುದಕ್ಕಾಗಿ ಬೆರಳೆಣಿಕೆಯಷ್ಟು ಅಭ್ಯಾಸಿಗಳಿರುವ ಕೇಂದ್ರಗಳು, (ಪಡತಂಗುಲಂ, ನಂಗುನೆರಿ, ಕೊಟ್ಟಾರಂ) ಹಾಗೂ ಗ್ರಾಮೀಣ ಪ್ರದೇಶದ ಹೊಸ ಕೇಂದ್ರಗಳೇ (ಪನಗುಡಿ, ತೋವಾಲೈ, ರಾಧಾಪುರಂ, ಚಿದಂಬರಪುರಂ, ಕೊಲಿಯಾಂಗುಲಮ್, ಮಣೂರ್ ಹಾಗೂ ಕರೈಯಿರುಪ್ಪು) ಉದ್ದೇಶದ ಕೇಂದ್ರ ಬಿಂದುಗಳಾಗಿದ್ದವು. ಗೃಹ ಕೂಟಗಳು ಹಾಗೂ ಮುಕ್ತ ಸಭೆಗಳ ಮೂಲಕ ಸಹೋದರ, ದೊರೈಯವರು ಸಾಮರ್ಥ್ಯವುಳ್ಳ ಅಭ್ಯಾಸಿಗಳನ್ನು ಅನುಸಂಧಾನ ಮಾಡಿದರು. ತಮಗೆ ಪರಿಚಯವಿರುವ ಹಾಗೂ ಸಹಜಮಾರ್ಗದ ಬಗ್ಗೆ ಸ್ವಲ್ಪ ಒಲವಿರುವ ಜನರನ್ನು ಕರೆತರುವ ಮೂಲಕ ಗುರುಗಳ ಕಾರ್ಯವನ್ನು ಅಭಿವೃದ್ಧಿಪಡಿಸುವುದರಲ್ಲಿ ಅಭ್ಯಾಸಿಗಳು ಮುಂದಾಳತ್ವವಹಿಸಬೇಕು ಎಂಬುದನ್ನು ಗಮನಿಸಿದರು.

ಸೆಪ್ಟೆಂಬರ್ 3 ರಂದು ಕನ್ಯಾಕುಮಾರಿ ಹಾಗೂ ಇತ್ತೀಚೆಗೆ ಬೆಳಕಿಗೆ ಬಂದಿರುವ ನಾಗರ್‌ಕೊಯಿಲ್‌ನ ಉಪಕೇಂದ್ರ ಕೊಟ್ಟಾರಂನಲ್ಲಿ ಒಂದು ಮುಕ್ತ ಸಭೆಯನ್ನು ಮಾಡಿದರು. ಅದರಲ್ಲಿ ಅಭ್ಯಾಸಿಗಳೊಂದಿಗೆ ವಿಚಾರವಿನಿಮಯವಿತ್ತು. ನಂತರ ಅವರ ನಾಗರ್‌ಕೊಯಿಲ್‌ನ ಧ್ಯಾನಮಂದಿರಕ್ಕೆ ಭೇಟಿ ನೀಡಿದರು. ಅಲ್ಲಿದ್ದ ಅಭ್ಯಾಸಿಗಳಿಗೆ ಗುರುಗಳೊಂದಿಗೆ ಸಾಮರಸ್ಯವನ್ನು ಹೊಂದುವುದು ಹೇಗೆ ಎನ್ನುವ ಬಗ್ಗೆ ಮಾತನಾಡಲು ಆಹ್ವಾನಿಸಲಾಯಿತು. ನಂತರ ನಾಗರ್‌ಕೊಯಿಲ್‌ನಿಂದ 10 ಕಿ.ಮೀ. ದೂರದಲ್ಲಿರುವ ಕೋವಲ್ಲೈನಲ್ಲಿ ಗೃಹಕೂಟ ಒಂದರಲ್ಲಿ ಭಾಗವಹಿಸಿದರು. ಪ್ರಶಿಕ್ಷಕರು ನೀಡಿದ ಭಾಷಣದಲ್ಲಿ ಆಹ್ವಾನಿತರೆಲ್ಲರೂ ಸಂಪೂರ್ಣವಾಗಿ ಮಗ್ನರಾಗಿದ್ದರು.

4 ರಂದು ಸಂಗಮುರಿಯಲ್ಲಿ ಹಾಗೂ ರಾಧಾಪುರಂ ಪ್ರದೇಶದಲ್ಲಿ ಗೃಹಕೂಟಗಳನ್ನು ನಡೆಸಿಕೊಟ್ಟರು. ತದನಂತರ ಕೊಲಿಯಾಂಕುಲಂನಲ್ಲಿ ನೆರೆಹೊರೆಯವರನ್ನು ಆಹ್ವಾನಿಸಿದ್ದ ಒಂದು ಮನೆಯಲ್ಲಿ ಗೃಹಕೂಟವನ್ನು ನಡೆಸಿಕೊಟ್ಟರು. ಭಾಷಣವನ್ನು ಆಲಿಸಿದ ನಂತರ ಎಲ್ಲರೂ ಧ್ಯಾನ ಪ್ರಾರಂಭಿಸುವಲ್ಲಿ ಆಸಕ್ತಿ ತೋರಿದರು. ಅವರು ರಾತ್ರಿ ಪಡಕಂಗುಲಂಗೆ ಹಿಂದಿರುಗಿ ಸತ್ಸಂಗವನ್ನು ಹಾಗು ಸಾಧನೆಯನ್ನು ಕುರಿತ ಪ್ರಶ್ನೋತ್ತರ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

5 ರಂದು (ಭಾನುವಾರ) ಸೋ. ದೊರೈರವರು ಪಡತಂಗುಲಂ ಕೇಂದ್ರದಲ್ಲಿ ತಿರುವೆಲ್‌ನಲ್ಲಿ, ನಾಗರ್‌ಕೊಯಿಲ್ ಹಾಗೂ ಕೊಟ್ಟಾರಂ ಕೇಂದ್ರಗಳಿಂದ ಸೇರಿದ್ದ ಸುಮಾರು 50 ಅಭ್ಯಾಸಿಗಳಿಗೆ ಪೂರ್ಣದಿನ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಸತ್ಸಂಗದ ನಂತರ ಅಭ್ಯಾಸಿಗಳಿಂದ ಭಾಷಣಗಳು, ಪ್ರಶಿಕ್ಷಕರಿಂದ ಸ್ಪಷ್ಟನೆ, ಗುಂಪು ಚರ್ಚೆ, ಗುರುಗಳ ಡಿವಿಡಿ ವೀಕ್ಷಣೆ ಹಾಗೂ ಗುರುಗಳ ಬೋಧನೆಗಳ ಪ್ರಸ್ತುತತೆ ಮುಂತಾದ ಕಾರ್ಯಕ್ರಮಗಳಿದ್ದವು. ನಂತರ ಸುಮಾರು 25 ಜನ ಆಹ್ವಾನಿತರಿಗೆ ಮುಕ್ತಸಭೆಯನ್ನು ಏರ್ಪಡಿಸಲಾಗಿತ್ತು. ೨೫ರಲ್ಲಿ ೧೨ ಜನರು ಪ್ರಾರಂಭಿಕ ಬೈಠಕ್ ಪಡೆಯುವುದಾಗಿ ಹೆಸರು ನೀಡಿದರು.

೭ರಂದು ತಿರುನೆಲ್‌ವೆಲ್ಲಿ ಆಶ್ರಮಕ್ಕೆ ಭೇಟಿ ನೀಡಿದ ನಂತರ ಅವರು ಮಣೂರ್ ಹಾಗು ಕುಡಿಯರುಪ್ಪು ಗ್ರಾಮಗಳಲ್ಲಿ ಗೃಹಕೂಟಗಳನ್ನು ನಡೆಸಿಕೊಟ್ಟರು.

ಈ ಪ್ರವಾಸದಲ್ಲಿ ಸಹೋದರ ದೊರೈರವರು ಕೆಳಕಂಡ ಅಂಶಗಳನ್ನು ಗಮನಿಸಿದರು.

- ❖ಗುರುಗಳು ಬಿತ್ತಿರುವ ಫಸಲು ಕೊಯ್ಲಿಗೆ ಸಿದ್ಧವಾಗಿದೆ ಹಾಗೂ ಇನ್ನೂ ಹೆಚ್ಚು ಕೆಲಸಗಾರರು, ವಿಶೇಷವಾಗಿ ತಮ್ಮ ಕೇಂದ್ರಗಳಿಂದ ಹೊರಹೋಗಿ ಹೊಸ ಕೇಂದ್ರಗಳನ್ನು ಮಾಡಿ; ಅವು ಸ್ವಾವಲಂಬಿಗಳಾಗುವವರೆಗೆ ಪೋಷಣೆ ಮಾಡುವ ಪ್ರಶಿಕ್ಷಕರ ಅವಶ್ಯಕತೆಯಿದೆ.
- ❖ಹೊಸದಾಗಿ ಪ್ರಾರಂಭಿಸಿರುವ ಅಭ್ಯಾಸಿಗಳು ವಾರಕ್ಕೊಮ್ಮೆ ಬೈಠಕವನ್ನು ಪಡೆಯಲೇ ಬೇಕು.
- ❖ಹೊಸ ಅಭ್ಯಾಸಿಗಳಿಗೆ ಪ್ರಶಿಕ್ಷಕರು ಪದ್ಧತಿಯ ಬಗ್ಗೆ ಸರಿಯಾಗಿ ಅರ್ಥ ಮಾಡಿಸಬೇಕು.
- ❖ಗೃಹ ಕೂಟ ಹಾಗೂ ಮುಕ್ತಸಭೆಯಂಥ ಗುಂಪು ಚಟುವಟಿಕೆಗಳು ಪ್ರಶಿಕ್ಷಕರಲ್ಲಿ ಹಾಗೂ ಅಭ್ಯಾಸಿಗಳಲ್ಲಿ ಏಕತೆ ಮತ್ತು ಭ್ರಾತೃತ್ವವನ್ನುಂಟು ಮಾಡುತ್ತವೆ. ಅಂತಹ ಸಂದರ್ಭಗಳಲ್ಲಿ ಹೆಚ್ಚಿನ ಉತ್ಸಾಹವನ್ನು ಗಮನಿಸಬಹುದಾಗಿದೆ ಹಾಗೂ ಗುರುಗಳ ಕಾರ್ಯಗಳಲ್ಲಿ ನಿರತರಾದಾಗ ಅವರ ಇರುವಿಕೆಯನ್ನು ಎಲ್ಲಾ ಸಮಯದಲ್ಲೂ ಅನುಭವಿಸಬಹುದಾಗಿದೆ.

ಈ ಪ್ರವಾಸದ ನಂತರ ದಕ್ಷಿಣ ತಮಿಳುನಾಡಿನ ವಲಯ ಮುಖ್ಯಸ್ಥರಾದ ಸೋ. ಟಿ.ವಿ.ವಿಶ್ವನಾಥ್‌ರವರು ವಿರುಧುನಗರ್, ಟ್ಯೂಟೀಕಾರನ್ ಹಾಗೂ ತಿರುನೆಲ್‌ವೆಲ್ಲಿ ಜಿಲ್ಲೆಗಳ ಅನೇಕ ಕೇಂದ್ರಗಳಿಗೆ ಸೆಪ್ಟೆಂಬರ್ 10ರಿಂದ 12 ರವರೆಗೆ ಭೇಟಿ ನೀಡಿದರು.

10 ರಂದು ವಿರುಧುನಗರ್, ಅರುಪ್ಪುಕೊಟ್ಟೈ ಹಾಗೂ ಕರಿಯಾಡಟ್ಟಿ ಕೇಂದ್ರಗಳಿಂದ ಸೇರಿದ್ದ ಸುಮಾರು 50 ಅಭ್ಯಾಸಿಗಳಿಗೆ ಚೆನ್ನೈ ವಲ್ಲಿಕುಲಂನ ಆಶ್ರಮದಲ್ಲಿ ಸತ್ಸಂಗವನ್ನು ನಡೆಸಿಕೊಟ್ಟರು. ಅಭ್ಯಾಸಿಗಳ ಕಿರು ಪರಿಚಯದ ನಂತರ ಮಧ್ಯಾಹ್ನದ ವರೆಗೆ ಅವರೊಂದಿಗೆ ಮಾತನಾಡಿದರು.

ತದನಂತರ ಕೋವಿಲ್‌ಪಟ್ಟಿಯಲ್ಲಿ ಸುಮಾರು 20 ಅಭ್ಯಾಸಿಗಳು ಸತ್ಸಂಗದಲ್ಲಿ ಭಾಗವಹಿಸಿದರು. ಇದಾದ ನಂತರ ಸಾಧನೆಯ ಕುರಿತು ಪ್ರಶ್ನೋತ್ತರ ಕಾರ್ಯಕ್ರಮವಿದ್ದಿತು.

11ರ ಬೆಳಗ್ಗೆ ಅವರು ಅರುವುಕ್ಕೊಟ್ಟೈ ಉಪಕೇಂದ್ರಕ್ಕೆ ಭೇಟಿ ನೀಡಿದರು. ಸತ್ಸಂಗವನ್ನು ನಡೆಸಿಕೊಟ್ಟರು ಹಾಗೂ ನೆರೆದಿದ್ದ 25 ಅಭ್ಯಾಸಿಗಳೊಂದಿಗೆ ವಿಚಾರವಿನಿಮಯ ಮಾಡಿಕೊಂಡರು. ಶ್ರೀವಿಲ್ಲಿಪುತ್ತೂರ್‌ನಲ್ಲಿ ಅಂದು ಸಂಜೆ ಸುಮರು 45 ಅಭ್ಯಾಸಿಗಳಿಗೆ ಸತ್ಸಂಗವನ್ನು ನಡೆಸಿಕೊಟ್ಟರು, ನಂತರ ಅಭ್ಯಾಸಿಗಳೊಂದಿಗೆ ವಿಚಾರ ವಿನಿಮಯ ಮಾಡಿಕೊಂಡರು. ಎಲ್ಲಾ ಅಭ್ಯಾಸಿಗಳು ಆಶ್ರಮಕ್ಕಾಗಿ ಒಂದು ಜಮೀನನ್ನು ಕೊಳ್ಳುವಲ್ಲಿ ಆಸಕ್ತಿಯನ್ನು ತೋರಿಸಿದರು. ಸೆಪ್ಟೆಂಬರ್ 12 ರಂದು ಅವರು ರಾಜಪಾಳ್ಯಂನಲ್ಲಿ ಭಾನುವಾರದ ಸತ್ಸಂಗವನ್ನು ನಡೆಸಿಕೊಟ್ಟರು ಹಾಗು ಸುಮಾರು 70 ಅಭ್ಯಾಸಿಗಳು ಇದರಲ್ಲಿ ಪಾಲ್ಗೊಂಡರು. ಇದಾದ ನಂತರ ಸಾಧನೆ ಹಾಗೂ ಚಾರಿತ್ರ್ಯ ನಿರ್ಮಾಣ ಕುರಿತ ಪ್ರತಿಸ್ಪಂದನವಿದ್ದ ಅರ್ಧದಿನದ ಕಾರ್ಯಕ್ರಮವು ಜರುಗಿತು.

ಮಧ್ಯಾಹ್ನ ಅವರು ತಿರುನೆಲ್‌ವೆಲ್ಲಿ ಜಿಲ್ಲೆಯ ತೆಂಕಾಸಿಯನ್ನು ತಲುಪಿದರು ಹಾಗೂ ಹತ್ತಿರದ ಪುಲಿಯಾಂಗುಡಿ ಮತ್ತು ಕಡೆಯಾನಲ್ಲೂರ್ ಉಪಕೇಂದ್ರಗಳಿಂದ ಬಂದಿದ್ದ ಅಭ್ಯಾಸಿಗಳಿಗೆ ಸಂಜೆ ಸತ್ಸಂಗವನ್ನು ನಡೆಸಿಕೊಟ್ಟರು. ಅಭ್ಯಾಸಿಗಳು ತಾವು ಸಹಜಮಾರ್ಗದ ಬಗ್ಗೆ ತಿಳಿದುಕೊಂಡಿರುವುದನ್ನು ಹಾಗೂ ಇದುವರೆಗೂ ಅವರಲ್ಲಾದ ಬದಲಾವಣೆಗಳನ್ನು ವ್ಯಕ್ತಪಡಿಸಿದರು.

ವಿಚಾರವಿನಿಮಯದ ನಂತರ ಸೋ. ವಿ.ವಿಶ್ವನಾಥ್‌ರವರು ಪುಲಿಯಾಂಗುಡಿ ಉಪಕೇಂದ್ರಕ್ಕೆ ಭೇಟಿ ನೀಡಿದರು. ಅಲ್ಲಿ ಸದ್ಯಕ್ಕೆ 35 ಅಭ್ಯಾಸಿಗಳು ಸಾಧನೆ ಮಾಡುತ್ತಿದ್ದಾರೆ. ಅಲ್ಲಿಂದ ಅವರು ರಾತ್ರಿ ತಿರುಪ್ಪೂರ್‌ಗೆ ಹಿಂದಿರುಗಿದರು.





ನವೆಂಬರ್ 2010 ಸಂಪುಟ 3 ಸಂಚಿಕೆ 6

ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ



## ಜಬಲ್ಪುರ (ಮ.ಪ್ರ.)ದಲ್ಲಿ ಪ್ರಶಿಕ್ಷಕರ ವಲಯ ಸಭೆ

22 ಮತ್ತು 23ನೇ ಆಗಸ್ಟ್

ಸಭೆಯನ್ನು ಇತ್ತೀಚೆಗೆ ಬಿಡುಗಡೆಗೊಳಿಸಿದ ಡಿವಿಡಿಯನ್ನು ಪ್ರಶಿಕ್ಷಕರಿಗೆ ತೋರಿಸುವ ಮೂಲಕ ಪ್ರಾರಂಭಿಸಲಾಯಿತು. ಸೋ. ಸಚಿನ್ ಸಿನ್ಹಾರವರು ಅಭ್ಯಾಸಿಗಳ ಮತ್ತು ಆಶ್ರಮದ ಸಂಖ್ಯೆಯನ್ನು ಗುರುತಿಸುವ ಮಧ್ಯಪ್ರದೇಶದ ನಕ್ಷೆಯನ್ನು ಪ್ರಸ್ತುತ ಪಡಿಸಿದರು. ಸೋ. ಡಾ.ಎಸ್.ವಿ.ದೇಶಪಾಂಡೆಯವರು ಪ್ರಶಿಕ್ಷಕರ ಕೆಲಸದಲ್ಲಿ ಹೇಗೆ ಮೊದಲು ಸಾಮರ್ಥ್ಯ ನೀಡಲಾಗುತ್ತದೆ ನಂತರ ಕಾರ್ಯವಹಿಸಲಾಗುತ್ತದೆ, ಸಾಮಾನ್ಯ ಆಚರಣೆಯಲ್ಲಿರುವ ಮೊದಲು ತರಬೇತಿ ನೀಡುವುದರ ಬದಲಾಗಿ ಕಲಿತು ಪ್ರಗತಿ ಹೊಂದುವುದರ ಬಗ್ಗೆ ಉತ್ತಮ ಉಪನ್ಯಾಸವನ್ನು ನೀಡಿದರು. ಇದೇ ಸಹಜಮಾರ್ಗದ ವಿಶಿಷ್ಟತೆ. ಹತ್ತು ನಿಯಮಗಳ ಮೇಲೆ ಕೆಲವು ಪ್ರಮುಖ ಪ್ರಶ್ನೆಗಳನ್ನಾಯ್ದು ಚರ್ಚೆ ಮಾಡಲು ಎಲ್ಲರಿಗೂ ನೀಡಲಾಯಿತು.

ಕೆಲವು ಪ್ರಶಿಕ್ಷಕರು ತಮ್ಮ ಅನುಭವಗಳನ್ನು ಇತರರೊಡನೆ ಹಂಚಿಕೊಂಡ ನಂತರ ಪ್ರಶ್ನೋತ್ತರ, ಆಟ ಮತ್ತು ಡಿವಿಡಿ ವೀಕ್ಷಿಸಲಾಯಿತು.

ಎರಡನೇ ದಿನದಂದೂ ಸಹ ಡಿವಿಡಿ ವೀಕ್ಷಿಸಲಾಯಿತು. ಆ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಶಿಕ್ಷಕರ ಅಂಕಿಅಂಶಗಳನ್ನು ಎಲ್ಲರಿಗೂ ತಿಳಿಸಲಾಯಿತು. ನಂತರ ವಲಯ ಪ್ರಬಂಧ ನಿರ್ವಹಕರಾದ ಸೋ. ನವೀನ್ ಮಿಶ್ರಾರವರು ವರದಿ, ಕಾರ್ಯವಿಧಾನ ಮತ್ತು ಅನುಭವಗಳನ್ನು ಹಂಚಿಕೊಂಡರು.

ಭೋಜನದ ನಂತರ ಸೋ. ಆನಂದ್ ಪರ್ಮಾರ್‌ರವರು "ಇ–ಮೇಲ್ ಮತ್ತು ಮಿಷನ್ನಿನ ಜಾಲತಾಣ"ದ ಬಗ್ಗೆ ಸ್ಪಷ್ಟ ಮತ್ತು ಉಪಯೋಗೀ ಉಪನ್ಯಾಸವನ್ನು ನೀಡಿದರು. ಸುಮಾರು 50 ಪ್ರತಿಶತ ಜನರಿಗೆ ಮಿಷನ್ನಿನ ಹೊಸ ಜಾಲತಾಣದ ಬಗ್ಗೆ ಅರಿವಿಲ್ಲದಿರುವುದು ತಿಳಿದುಬಂದಿತು. ಸೋ. ಸಚಿನ್ ಸಿನ್ಹಾರವರು "ಅವರನ್ನು ಆಂತರ್ಯವಾಗಿಸಿಕೊಳ್ಳಿ" ಎಂಬ ವಿಷಯದ ಬಗ್ಗೆ ಮಾತನಾಡಿದರು. ಮಧ್ಯಪ್ರದೇಶ ವಲಯಕ್ಕಾಗಿ ಮುನ್ನೋಟ 2011 ಪ್ರಸ್ತುತ ಪಡಿಸಿ ವಲಯನಿರ್ವಾಹಕರು 10 ಅಂಶಗಳನ್ನು ನೀಡಿದರು.

ಮ.ಪ್ರ.ದಲ್ಲಿನ ಕಾರ್ಯನಿರ್ವಾಹಕರಾದ ಸೋ. ರಾಜೇಶ್ ರವೇರ್ಕರ್‌ರವರು ಸ್ವಯಂಸೇವಕರು ಮತ್ತು SMRTI ನ ನಿರ್ವಾಹಕರೊಡನೆ ನಡೆಸಿದ ಸಭೆಯ ವರದಿ ಸಲ್ಲಿಸಿದರು ಹಾಗೂ ಮುಂದಿನ ವರ್ಷದ ಚಟುವಟಿಕೆಗಳ ಕ್ಯಾಲೆಂಡರ್‌ನ ಮೂಲ ಕಾರ್ಯ ಮುಗಿದಿದ್ದು ಶೀಘ್ರವೇ ಅದನ್ನು ತಯಾರಿಸಿ ಸಕಲರಿಗೂ ನೀಡಲಾಗುವುದೆಂದು ತಿಳಿಸಿದರು. ಜಬಲ್ಪುರದ ಕೇಂದ್ರಮುಖ್ಯಸ್ಥರಾದ ಸೋ.ಆನಂದ್‌ರವರು ಎಲ್ಲರಿಗೂ ಕೃತಜ್ಞತೆ ಸಲ್ಲಿಸಿ ಧನ್ಯವಾದಗಳನ್ನರ್ಪಿಸಿದರು. ಅವರು ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಶ್ರಮಿಸಿದ ಜಬಲ್ಪುರದ ಅಭ್ಯಾಸಿಗಳಿಗೆ ವಿಶೇಷ ಕೃತಜ್ಞತೆ ಸಲ್ಲಿಸಿದರು. ಸುಮಾರು 50 ಪ್ರಶಿಕ್ಷಕರು ಮತ್ತು 55 ಸ್ವಯಂಸೇವಕರು ಸಭೆಯಲ್ಲಿ ಹಾಜರಿದ್ದರು.

## ಕೇಂದ್ರ ಮುಖ್ಯಸ್ಥರು ಮತ್ತು ಪ್ರಶಿಕ್ಷಕರ ಸಭೆ (ತಮಿಳುನಾಡು ಉತ್ತರ ವಲಯ)

ಸೆಪ್ಟಂಬರ್ 11ರಂದು ಚೆನ್ನೈನ ಮಣಪಾಕ್ಕಂ ಆಶ್ರಮದಲ್ಲಿ ತಮಿಳುನಾಡು ಹಾಗೂ ಅಂಡಮಾನ್–ನಿಕೋಬಾರ್‌ನಿಂದ 52 ಭಾಗಿಗಳು ಒಟ್ಟುಗೂಡಿದ್ದರು.

ಸೋ. ಎ.ಪಿ.ದೊರೈ(ಜಂಟಿ ಕಾರ್ಯದರ್ಶಿ) ಮತ್ತು ಸೋ. ಎಸ್.ಪ್ರಕಾಶ್(ವಲಯನಿರ್ವಾಹಕರು) ರವರ ಸಭೆಯನ್ನುದ್ದೇಶಿಸಿ ಮಾತನಾಡುವುದರೊಡನೆ ಕಾರ್ಯಕ್ರಮವು ಪ್ರಾರಂಭವಾಯಿತು.

ಭಾಗಿಗಳಲ್ಲಿ ಮುಂಚಿತವಾಗಿಯೇ ಗುಂಪುಗಳನ್ನು ಮಾಡಿ ಅವರು ತಯಾರಾಗಿ ಬರಲು ಅನುಕೂಲವಾಗುವಂತೆ ವಿಷಯಗಳನ್ನೂ ನೀಡಲಾಗಿತ್ತು. ವಿಷಯಗಳು– "ಅಭ್ಯಾಸಿಗಳ ಆಧ್ಯಾತ್ಮಿಕ ಪ್ರಗತಿಗಾಗಿ ಯೋಜನೆಗಳು", "ಕೇಂದ್ರವೊಂದರ ನಿರಂತರ ಪ್ರಗತಿ", "ಅಭ್ಯಾಸಿಗಳಲ್ಲಿ ಚಾರಿತ್ರ್ಯ ನಿರ್ಮಾಣ" ಮತ್ತು "ಮೌಲ್ಯಾಧಾರಿತ ಶಿಕ್ಷಣದ ಮೂಲಕ ತರುಣರೆಡೆ ಹೆಚ್ಚಿನ ಗಮನ". ಚರ್ಚೆಯಲ್ಲಿ ಹೊರಬಂದ ಕೆಲವು ಮುಖ್ಯ ಅಂಶಗಳೆಂದರೆ ಮಿಷನ್ನಿನ ಸಾಹಿತ್ಯವಾಚನದ ಪ್ರಾಮುಖ್ಯತೆ, ಸ್ವಯಂಸೇವೆಯ ಮೂಲಕ ಸಲ್ಲಿಸುವ ಸೇವೆ, ಆಂತರಿಕ ಆರಾಧನೆ, ಇತರರಿಗಾಗಿ ಪ್ರಾರ್ಥಿಸುವುದು, ಉತ್ತಮ ವಾತಾವರಣದ ನಿರ್ಮಾಣ, ಗುರುಗಳಿಗೆ ಅಭ್ಯಾಸಿಯ ಸರಿಯಾದ ಪರಿಚಯ, ಶಿಸ್ತು, ಪ್ರೇಮಭರಿತ ಸಾಧನೆ, ಸತತ ಸ್ಮರಣೆ, ಭಾವನೆ ಮತ್ತು ಸಂವೇದನೆಗಳಿಗಿರುವ ವ್ಯತ್ಯಾಸ, ನೈತಿಕ ಮೌಲ್ಯಗಳು, ಸಮೂಹಕಾರ್ಯ ಇತ್ಯಾದಿ. ಇದೊಂದು ಉತ್ತಮ ಕಲಿಕಾ ಅನುಭವ ನೀಡಿದ್ದು ಆಲೋಚಿಸಿ ಕಾರ್ಯರೂಪಕ್ಕೆ ತರಲು ಅನೇಕ ಮಾರ್ಗಗಳು ಅನಾವರಣಗೊಂಡವು. ವೆಲ್ಲೋರ್ ಭಾಗದ ಮುಖ್ಯಸ್ಥರಾದ ಸೋ. ಲಕ್ಷ್ಮೀನಾರಾಯಣನ್‌ರವರು ವೈಯಕ್ತಿಕ ಬೈಠಕುಗಳು ಮತ್ತು ಪ್ರಶಿಕ್ಷಕರು ತಮ್ಮ ಕೇಂದ್ರದ ಹೊರತು ಬೇರೆಡೆ ಪಯಣಿಸುವುದರ ಮಹತ್ವವನ್ನು ವಿವರಿಸಿದರು. ಅವರು ಅಭ್ಯಾಸಿ ತರಬೇತಿ ಕಾರ್ಯಕ್ರಮಗಳು ಕೇಂದ್ರಗಳಲ್ಲಿ ಮಹತ್ತರ ಬದಲಾವಣೆಯನ್ನು ತರುತ್ತಲಿವೆ ಎನ್ನುತ್ತಾ ಕೇಂದ್ರಮಟ್ಟದ ಸಭೆಗಳನ್ನು ಬೆಂಬಲಿಸಿ ಹೊಸ ಕೇಂದ್ರಗಳನ್ನು ಗುರುತಿಸಬೇಕೆಂದು ತಿಳಿಸಿದರು.

ಪ್ರಮುಖ ವಿಭಾಗಗಳಾದ SMRTI, ಸದಸ್ಯತ್ವ, ಪ್ರಕಟನೆ, ಲೆಕ್ಕವಿಭಾಗಗಳು ತಮ್ಮ ಕಾರ್ಯವೈಖರಿಯನ್ನು ಸವಿವರವಾಗಿ ನೀಡಿ ಕೇಂದ್ರಗಳಿಂದ ತಾವೇನು ನಿರೀಕ್ಷಿಸುತ್ತೇವೆ ಎಂಬುದನ್ನು ಸ್ಪಷ್ಟಗೊಳಿಸಿದರು.

ಸೋ. ಎಸ್.ಪ್ರಕಾಶ್‌ರವರು ಮುಕ್ತಾಯ ಭಾಷಣದಲ್ಲಿ ಅಲ್ಲಿಯವರೆಗಿನ ಚರ್ಚೆಯಿಂದ ತೆಗೆದುಕೊಂಡ 10 ಕಾರ್ಯಕಾರಿ ಅಂಶಗಳನ್ನು ತಿಳಿಸಿದರು. ಆ ಅಂಶಗಳೆಂದರೆ– ಎಲ್ಲಾ ಕೇಂದ್ರ, ಮುಕ್ತಸಭೆ/ ಗೃಹಕೂಟ/ಸ್ವಾಗತ ವಿಭಾಗಗಳಲ್ಲಿ ಅಭ್ಯಾಸಿ ತರಬೇತಿ ಕಾರ್ಯಕ್ರಮ ನಡೆಸುವುದು, ವ್ಯಕ್ತಿಗತ ಸಾಧನೆ ಮತ್ತು ಬೈಠಕುಗಳೆಡೆ ಗಮನನೀಡುವುದು, ಪ್ರಶಿಕ್ಷಕರ ಭೇಟಿಯ ವಿನಿಮಯ, ಭಾನುವಾರದ ಚಟುವಟಿಕೆಗಳು, ಹೊಸ ಕೇಂದ್ರಗಳ ಅಭಿವೃದ್ಧಿ, ತರುಣರ ಪ್ರಗತಿ, ಭಂಡಾರದಲ್ಲಿ ಭಾಗವಹಿಸುವಿಕೆ, ಮಣಪಾಕ್ಕಂಗೆ ಭೇಟಿ ಮತ್ತು ಮಿಶನ್ನಿನ ಸಾಹಿತ್ಯದ ಪರಿಣಾಮಕಾರೀ ಉಪಯೋಗ. ಭಾಗಿಗಳೆಲ್ಲರು ನಂತರ ಗುರುಗಳನ್ನು ಭೇಟಿಯಾದಾಗ ಅವರು ಎಲ್ಲರಿಗೂ "ಇದರ ನಂತರ ಉತ್ತಮವಾಗಿ ಕೆಲಸ ಮಾಡಿ!" ಎಂದು ಹೇಳಿದರು.



ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ



ಅಲಾಹಬಾದ್


ರಾಂಚಿ

## ಅಭ್ಯಾಸಿ ತರಬೇತಿ ಕಾರ್ಯಕ್ರಮಗಳು

SMRTI ನ ವಿಚಾರವಾದ ಅಭ್ಯಾಸಿ ತರಬೇತಿ ಕಾರ್ಯಕ್ರಮಗಳು ದೇಶದಾದ್ಯಂತ ನಡೆಸಲಾಗುತ್ತಿವೆ. ಇವು ಪದ್ಧತಿಯನ್ನು ಹೆಚ್ಚು ಅರಿತುಕೊಳ್ಳಲು ಮತ್ತು ಸಾಧನೆಯನ್ನು ನಿಯಮಿತವಾಗಿ ಮತ್ತು ಶ್ರದ್ಧೆಯಿಂದ ಮಾಡುವ ಉತ್ಸುಕತೆಯನ್ನು ಮೂಡಿಸುತ್ತವೆ ಎಂಬುದು ಅಭ್ಯಾಸಿಗಳ ಅಭಿಪ್ರಾಯ. ಸಹಜಮಾರ್ಗ ಸಾಧನೆಯ ಎಲ್ಲಾ ಅಂಶಗಳನ್ನು ವ್ಯವಸ್ಥಿತವಾಗಿ ತಿಳಿಸಲಾಗಿದೆ ಹಾಗೂ ಇದರಿಂದ ನಮ್ಮ ದೈನಂದಿನ ಸಾಧನೆಯಲ್ಲಿ ಏಳುವ ಸಂಶಯಗಳು ನಿವಾರಣೆಯಾಗುತ್ತವೆ. ಈ ತರಬೇತಿ ಕಾರ್ಯಕ್ರಮಗಳನ್ನು ಅತ್ಯಂತ ಉತ್ಸಾಹದಿಂದ ತೆಗೆದುಕೊಳ್ಳಲಾಗಿದೆ. ಬಹುಸಂಖ್ಯೆಯ ಅಭ್ಯಾಸಿಗಳು ಗುರುಗಳ ದೃಶ್ಯ-ಶ್ರಾವ್ಯ ವರ್ಣನೆಗಳು ಸಾಧನೆಯ ಮೂಲತತ್ವಗಳ ಕುರಿತು ಎದ್ದ ತಮ್ಮ ಅನೇಕ ಸಂದೇಹಗಳನ್ನು ಹೋಗಲಾಡಿಸಲು ನೆರವಾಗಿವೆ ಎನ್ನುತ್ತಾರೆ. ಈ ಕಾರ್ಯಕ್ರಮದಿಂದ ದಿನಚರಿ ಬರವಣಿಗೆಯ ಮಹತ್ವ, ಮಿಷನ್ನಿನ ಸಾಹಿತ್ಯದ ನಿಯಮಿತ ವಾಚನೆ, ನಿಯಮಿತವಾಗಿ ಸತ್ಸಂಗದಲ್ಲಿರುವುದು ಮತ್ತು ಇನ್ನಿತರ ವಿಷಯಗಳ ಮಹತ್ವದ ಅರಿವಾಗಿದೆ ಎಂದು ಅಭ್ಯಾಸಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.

| ಕೇಂದ್ರ | ದಿನಾಂಕ | ಭಾಗವಹಿಸಿದ ಕೇಂದ್ರಗಳು | ನಿರ್ವಾಹಕರು |
|---|---|---|---|
| ಸತ್ಯಮಂಗಲಂ | ಆಗಸ್ಟ್ 29 | ಸತ್ಯಮಂಗಲಂ, ಪುಳಿಯಂಪಟ್ಟಿ ಮತ್ತು ಅಣ್ಣೂರು ಕೇಂದ್ರಗಳು | ಸೋ.ಅಶೋಕನ್, ಸೋ.ಅಣ್ಣಾದೊರೈ ಮತ್ತು ನಡೆಸಿಕೊಟ್ಟವರು ಕೊಯಂಬತ್ತೂರ್ ಕೇಂದ್ರದ ಪ್ರಶಿಕ್ಷಕ ಸೋ.ಪಳನಿ ಕುಮಾರನ್ |
| ಕೆಜಿಎಫ್ | ಸೆಪ್ಟಂಬರ್ 5 | ಕೆಜಿಎಫ್, ಮುಳಬಾಗಲು ಮತ್ತು ಕುಪ್ಪಂ (ಆಂ.ಪ್ರ.) | ಮೈಸೂರಿನ ಸೋ. ಶಶಿಕಾಂತ್, ಸೋ.ಶ್ರೀಧರ್ |
| ಜಮ್‌ಶೆಡ್‌ಪುರ್ | ಸೆಪ್ಟಂಬರ್ 18 | | ಸೋ.ಅನಸೂಯಾ ರಾಮಚಂದ್ರನ್ |
| ಉನಾ | ಅಕ್ಟೋಬರ್ 3 | ಉನಾ, ಬಜೌರ(ಕುಲು) ಮತ್ತು ಪಾಲನ್‌ಪುರ್ | ಜಮ್ಮುವಿನ ಅ.ತ.ಕಾ. ತಂಡ |
| ಮುಂಬೈ | ಆಗಸ್ಟ್ 14 | | ಸೋ. ಮಣಿ |
| ನಾಂದೇಡ್ | ಆಗಸ್ಟ್ 22 | | ಚಿಖಲಿ ಕೇಂದ್ರದ ಡಾ.ಪರಿಹಾರ್ ಮತ್ತು ಡಾ.ಚೌಧರಿ |
| ಸೇಡಂ, ಗುಲ್ಬರ್ಗಾ | ಸೆಪ್ಟಂಬರ್ 5 | | |
| ರಾಯಚೂರು, ಉ.ಕರ್ನಾಟಕ | ಸೆಪ್ಟಂಬರ್ 12 | | ಸೋ. ಪ್ರಹ್ಲಾದ್ ಪಾಖಣೀಕರ್ |
| ಗುಲ್ಬರ್ಗಾ | ಸೆಪ್ಟಂಬರ್ 19 | | ಸೋ. ನಿಜಲಿಂಗಪ್ಪ ಮತ್ತು ಸೋ.ಮಹೇಶ್ ದೇಶಪಾಂಡೆ |
| ಕರ್ನೂಲು | ಆಗಸ್ಟ್ 22 | | |
| ಅನಂತಪುರ | ಆಗಸ್ಟ್ 29 | | |
| ನಂದ್ಯಾಲ | ಸೆಪ್ಟಂಬರ್ 12 | | |
| ಕಡಪ | ಸೆಪ್ಟಂಬರ್ 19 | | |
| ಹಿಂದುಪುರ | ಅಕ್ಟೋಬರ್ 10 | | ಸ್ಮೃತಿ ಚೌಬೆ, ಸೋ.ನೀರಾ ವರ್ಮಾ, ಸೋ.ಇಂದು ಪಾಂಡೆ, ಸೋ. ಅತುಲ್ ಜೈನ್ |
| ರಾಂಚಿ | ಅಕ್ಟೋಬರ್ 2 | | |
| ವಿರುಧುನಗರ್ | ಸೆಪ್ಟಂಬರ್ 26 | ವಿರುಧುನಗರ್, ಶ್ರೀವಲ್ಲಿಪುತ್ತೂರು, ಶಿವಕಾಶಿ, ಕೋವಿಲಪಟ್ಟಿ | ಸೋ. ಬಾಲಸುಬ್ರಮಣ್ಯಂ |
| ರಾಂಚಿ | ಸೆಪ್ಟಂಬರ್ 26 | ಬಿಹಾರ್, ಜಾರ್ಖಂಡ್ | ಸೋ.ಅನಸೂಯಾ ರಾಮಚಂದ್ರನ್ |


ವಿರುಧುನಗರ್


ಅನಂತಪುರ


ಸೆಡಮ್

## ಪ್ರಾದೇಶಿಕ ತಜ್ಞರಸಭೆ, ಆಲುವಾ



ಆಲುವಾದ ವಲಯಾಶ್ರಮದಲ್ಲಿ 2010ರ ಸೆಪ್ಟಂಬರ್ 10–12ರಂದು ಪ್ರಾದೇಶಿಕ ತಜ್ಞರಸಭೆಯನ್ನು ಆಯೋಜಿಸಲಾಗಿತ್ತು. ಸಭೆಯು ಸತ್ಸಂಗದೊಡನೆ ಪ್ರಾರಂಭವಾಯಿತು. ಮೊದಲ ಕಾಲಾವಧಿಯಲ್ಲಿ SMRTI ಯು ಸಿದ್ಧಪಡಿಸಿದ ಸಿಡಿ ಆಧಾರಿತ ಮೊದಲ ತರಬೇತಿ ಕಾರ್ಯಕ್ರಮವನ್ನು ನಡೆಸಲಾಯಿತು. ಭೋಜನಾನಂತರದ ಸಮಯವನ್ನು ಅಭ್ಯಾಸಿಗಳು ನೀಡಿದ ಪ್ರಸ್ತುತಿಯ ಕುರಿತು ಚರ್ಚೆಗೆ ಮೀಸಲಿಡಲಾಯಿತು. ತಿರುಪ್ಪೂರಿನ ಸೋ. ಎನ್.ಪ್ರಕಾಶ್‌ರವರು ಸಭೆಯನ್ನು ಕುರಿತು ಮಾತನಾಡಿದ ನಂತರ ಸತ್ಸಂಗವನ್ನು ನಡೆಸಿಕೊಟ್ಟರು. ನಂತರ ಅನೌಪಚಾರಿಕವಾಗಿ ಮಾತನಾಡುತ್ತಾ ಅವರು ಗುರುಗಳು ಕೇರಳದಲ್ಲಿ ಸಹಜಮಾರ್ಗವು ಉನ್ನತಿಹೊಂದುತ್ತಿರುವ ಬಗ್ಗೆ ಸಂತೋಷವಾಗಿದ್ದಾರೆ ಎಂದು ಹೇಳಿದ್ದಾರೆ.

11ರಂದು ಬೆಳಗಿನ 6.30ಘಂಟೆಗೆ ಪ್ರಶಿಕ್ಷಕರಿಗಾಗಿ ಸತ್ಸಂಗ ನಡೆಸಿದ ನಂತರ 9 ಘಂಟೆಗೆ ಎಲ್ಲರಿಗಾಗಿ ಸತ್ಸಂಗ ನಡೆಸಲಾಯಿತು. ಸೋ. ಪ್ರಕಾಶ್‌ರವರು ಗುರುಗಳನ್ನು ಗಮನಿಸಿ,ವಿಧೇಯರಾಗಿ ಮತ್ತು ಅನುಕರಿಸಿ ಎನ್ನುವುದರ ಬಗ್ಗೆ ಪ್ರಸ್ತುತಿ ನೀಡಿದರು. ಡಾ. ಸತೀಶನ್‌ರವರು ಅದನ್ನು ಮಲಯಾಳಂಗೆ ಸುಂದರವಾಗಿ ಅನುವಾದಿಸಿದರು. ಭೋಜನದ ನಂತರ ಅಭ್ಯಾಸಿಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ವಲಯಾಧಿಕಾರಿ ಸೋ.ಕೆ.ಯು.ಮೋಹನ್‌ರವರು ಸ್ಥಳೀಯ ಜನರ ಸಭೆಯನ್ನುದ್ದೇಶಿಸಿ ಮಾತನಾಡಿದರು. 12ರ ಬೆಳಗಿನ 7.30ರ ಸತ್ಸಂಗದ ನಂತರ ಸೋ.ಸುಂದರಮ್ ಮತ್ತು ಸೋ.ಪ್ರಕಾಶ್‌ರವರ ಲಘು ಮುಕ್ತಾಯ ಭಾಷಣದ ನಂತರ ಸಭೆಯು ಸಮಾಪ್ತಿಯಾಯಿತು. ಅಲುವಾ ಮತ್ತು ಸುತ್ತಲಿನ 7 ಕೇಂದ್ರಗಳು ಮತ್ತು ಉಪಕೇಂದ್ರಗಳಿಂದ ಸುಮಾರು 230 ಅಭ್ಯಾಸಿಗಳು ಪಾಲ್ಗೊಂಡಿದ್ದರು.

## ಅಲಹಾಬಾದ್

ಆಗಸ್ಟ್ 15,2010 ರಂದು ಅಹಮದಾಬಾದ್‌ನಲ್ಲಿ ಹಿಂದಿಯಲ್ಲಿ ಅ.ತ.ಕಾ.ವನ್ನು ಆಯೋಜಿಸಲಾಗಿತ್ತು. ಅಲಹಾಬಾದ್ ಮತ್ತು ಝಾನ್ಸಿ ಕೇಂದ್ರಗಳಿಂದ 35 ತರಬೇತುದಾರರು ಪಾಲ್ಗೊಂಡರು. ಕೇಂದ್ರದ ಮುಖ್ಯಸ್ಥ ಸೋ. ತ್ರಿವೇದಿಯವರು ಸ್ವಾಗತ ಕೋರಿದರು. ಸೋ. ಲಲಿತಾ ಶರ್ಮಾರವರು ಸ್ವಯಂಸೇವಕರ ತಂಡದೊಡಗೂಡಿ ನಡೆಸಿಕೊಟ್ಟ ಕಾರ್ಯಕ್ರಮವನ್ನು ಸೋ. ಉಮಾಶಂಕರ್ (ಕಾರ್ಯದರ್ಶಿ)ರವರು ಉದ್ಘಾಟಿಸಿದರು. ಪ್ರತೀ ಕಾಲಾವಧಿಯ ನಂತರ ಪ್ರಶ್ನೋತ್ತರವಿದ್ದಿತು. ಇದೇ ಕೇಂದ್ರದಲ್ಲಿ ಸೆಪ್ಟಂಬರ್ 5ರಂದು ನಡೆಸಿದ ಮತ್ತೊಂದು ತರಬೇತಿಯಲ್ಲಿ ಅಲಹಾಬಾದ್, ಝಾನ್ಸಿ, ಬಾಂಡಾ, ತರವಾಯಿ ಮತ್ತು ಬಾಮ್‌ಪುರದಿಂದ 36 ಜನ ಭಾಗವಹಿಸಿದರು.

## ತಿರುಪ್ಪೂರು, ತಮಿಳುನಾಡು(ದ)



ರಾಷ್ಟ್ರೀಯ ಸೇವಾ ಯೋಜನೆಯ ಪ್ರಯುಕ್ತ ತಿರುಪ್ಪೂರಿನ ಕೆ.ಎಸ್.ಸಿ.ಶಾಲೆಯ 25 ವಿದ್ಯಾರ್ಥಿಗಳು ಡೈಮಂಡ್ ಜುಬಿಲಿ ಪಾರ್ಕ್‌ನ ಆವರಣದಲ್ಲಿ 25 ಸೆಪ್ಟಂಬರ್‌ನಿಂದ ಪ್ರಾರಂಭಗೊಂಡು 6 ದಿನಗಳ ಕಾಲ ಶಿಬಿರವನ್ನು ಏರ್ಪಡಿಸಿದ್ದರು. ಬಿದ್ಯಾರ್ಥಿಗಳು ಆಶ್ರಮದ ಪೋಷಣಾ ಕಾರ್ಯಕಳನ್ನು ಕೈಗೊಂಡರು ಮತ್ತು ಪ್ರತೀ ಮಧ್ಯಾಹ್ನ 2.30 ಕ್ಕೆ “ಶಿಸ್ತು” ಮತ್ತು “ನಡತೆ”ಯ ಕುರಿತು ಗುರುಗಳ ಅಭಿಪ್ರಾಯವನ್ನು ತಿಳಿಸಲಾಯಿತು.

ಅಕ್ಟೋಬರ್ 3ರಂದು ತಿರುಪ್ಪೂರಿನ ಚೆಟ್ಟಿಪಾಳ್ಯಂ ಯೋಗಾಶ್ರಮದಲ್ಲಿ ಮುಕ್ತಸಭೆಯೊಂದನ್ನು ಆಯೋಜಿಸಲಾಗಿತ್ತು. ಸತ್ಸಂಗದ ನಂತರ ವಲಯಾಧಿಕಾರಿ ಸೋ.ಟಿ.ವಿ.ವಿಶ್ವನಾಥ್‌ರವರು ಭಾಗಿಗಳನ್ನು ಸ್ವಾಗತಿಸಿದರು. ಒಟ್ಟಾರೆ 45 ಆಹ್ವಾನಿತರು ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಕೇಂ.ಮುಖ್ಯಸ್ಥ ಸೋ. ಆರ್.ಷಣ್ಮುಗಂ ಮತ್ತು ಸೋ. ಎನ್.ಪಿ.ಪ್ರಕಾಶ್‌ರವರು ಸಹಜಮಾರ್ಗ ಪದ್ಧತಿಯನ್ನು ಸವಿವರವಾಗಿ ತಿಳಿಸಿದರು. 22 ಜನ ಮಿಷನ್ನನ್ನು ಸೇರಿಕೊಳ್ಳಲು ಆಸಕ್ತಿ ತೋರಿಸಿ ಮೊದಲ ಬೈಠಕನ್ನೂ ತೆಗೆದುಕೊಂಡರು.

## ರಾಯ್‌ಪುರ್

ಸೆಪ್ಟಂಬರ್ 23ರಂದು ರಾಯಪುರ ಕೇಂದ್ರವು ಬರಡೇರಾ ಶಿಬಿರದ 65ಬೆಟಾಲಿಯನ್ ಸಿ.ಆರ್.ಪಿ.ಎಫ್. ಮುಖ್ಯಕೇಂದ್ರದಲ್ಲಿ “ಸೈನಿಕರ ದೈನಂದಿನ ಜೀವನದಲ್ಲಿ ಧ್ಯಾನ” ಎಂಬ ವಿಷಯದ ಮೇಲೆ ಮುಕ್ತ ಸಭೆಯನ್ನು ಆಯೋಜಿಸಿತ್ತು. ಈ ಕಾರ್ಯಕ್ರಮದ ರೂವಾರಿ ರಾಯಪುರದ ಸಿ.ಆರ್.ಪಿ.ಎಫ್.ನ ಪೋಲೀಸ್ ವರಿಷ್ಠಾಧಿಕಾರಿಯಾದ ಸೋ. ಸಂದೀಪ್ ದತ್ತಾ.



ಸೋ.ರಜನಿ ದತ್ತಾರವರು ಮಾನವನ ಅಸ್ಥಿರ ಮನವು ಓಲಾಡುತ್ತಿರುವ ಚೆಂಡಿದ್ದಂತೆ ಮತ್ತು ಆ ಓಲಾಟವನ್ನು ಇಳಿಸಬೇಕಾದ ಅಗತ್ಯವನ್ನು ವಿವರಿಸಿದರು. ಸೈನಿಕರ ದೈನಂದಿನ ಜೀವನದಲ್ಲಿ ಧ್ಯಾನದ ಪಾತ್ರವನ್ನು ಸೋ. ದೀಪಕ್ ತ್ಯಾಗಿಯವರು ತಿಳಿಸಿದರು. ಧ್ಯಾನವು ಪರಮೋಚ್ಛದೊಡನೆ ನಮ್ಮನ್ನು ಸಂಪರ್ಕಿಸುವುದಷ್ಟೇ ಅಲ್ಲದೆ ಸಂಸಾರ ಮತ್ತು ದೇಶದೆಡೆ ಲಕ್ಷ್ಯವಹಿಸಿ ನಿಜವಾದ ತೃಪ್ತಿ ದೊರೆಯುವಂತೆ ಮಾಡುತ್ತದೆ ಎಂದು ಹೇಳಿದರು. ನಂತರ ಅವರು ಸೈನಿಕರ ಸಂದೇಹ ನಿವಾರಣೆ ಮಾಡಿದರು. ಅವರಲ್ಲಿ ಕಂಡುಬಂದ ಬಹಳಷ್ಟು ತೊಂದರೆಗಳು ಆತಂಕ, ಪ್ರಯಾಸ, ತಿಳಿಯದ ಭಯ, ನಿರಾಶೆ, ನಿದ್ರಾಹೀನತೆಗೆ ಸಂಬಂಧಪಟ್ಟವುಗಳಾಗಿದ್ದವು. ಸೋ. ತ್ಯಾಗಿಯವರು ಧ್ಯಾನದ ಶಕ್ತಿಯನ್ನು ಒತ್ತಿ ಹೇಳುತ್ತಾ ಪ್ರತೀ ತೊಂದರೆಯನ್ನು ಬಗೆಹರಿಸುವ ಅದ್ಭುತ ವಿಧಾನವೆಂದು ಹೇಳಿದರು.



## ಮೌಲ್ಯಾಧಾರಿತ ಶಿಕ್ಷಣ ಪದ್ಧತಿ ಕುರಿತು ಸಭೆ ಮತ್ತು ಕಮ್ಮಟ, ಅಲುವಾ, ಕೇರಳ



ಕೇರಳ ವಲಯಾಶ್ರಮವಾದ ಅಲುವಾ ಕೇಂದ್ರದಲ್ಲಿ ಆಗಸ್ಟ್ 29ರಂದು 5–10 ನೇ ತರಗತಿಯ ಮಕ್ಕಳಿಗಾಗಿ ಮೌ.ಶಿ.ಪ. ಯ ಕಮ್ಮಟವನ್ನು ಏರ್ಪಡಿಸಿತ್ತು. ರಾಜಶ್ರೀ ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ. ಸೂಸನ್ ಜಾನ್‌ರವರು ಉದ್ಘಾಟಿಸಿದ ಸಭೆಯಲ್ಲಿ ಅನೇಕಶಾಲೆಗಳಿಂದ ಬಂದ 45 ಮಕ್ಕಳು ಹಾಜರಿದ್ದರು. ಪಠನ ಮತ್ತು ಸಾರ್ವಜನಿಕ ಭಾಷಣಗಳ ಸ್ಪರ್ಧೆ ಮತ್ತು ಕೊನೆಯಲ್ಲಿ ಕ್ವಿಜ್ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಮಕ್ಕಳಿಂದ ದೊರೆತ ಪ್ರತಿಕ್ರಿಯೆ ಶ್ಲಾಘನೀಯ. ಪಾಲಕರಿಂದ ಕೂಡ ಉತ್ತಮ ಪ್ರತಿಕ್ರಿಯೆ ದೊರಕಿತು. ಮುಖ್ಯೋಪಾಧ್ಯಾಯಿನಿಯು ತಮ್ಮ ಶಾಲೆಯ ಶಿಕ್ಷಕರ ಸಲುವಾಗಿ ಸಹ ಇಂತಹ ಕಾರ್ಯಕ್ರಮ ನಡೆಸಿಕೊಡಲು ಬಿನ್ನವಿಸಿದರು. ಪರಿಣಾಮವಾಗಿ, ಕಡುಂಗಳೂರಿನ ರಾಜಶ್ರಿ ಶಾಲೆಯ ಶಿಕ್ಷಕರಿಗಾಗಿ ಸೆಪ್ಟಂಬರ್ 25ರಂದು ಒಂದು ದಿನದ ಮೌ.ಶಿ.ಪ. ಬಗ್ಗೆ ಕಮ್ಮಟವನ್ನು ನಡೆಸಲಾಯಿತು. ಸೋ. ಎ.ಮಾಧವನ್, ಸೋ.ಟಿ.ಪಿ.ನಾರಾಯಣನ್, ಸೋ.ಎ.ಜಯಪ್ರಕಾಶ್ ಮತ್ತು ಸೋ. ವಿಜಯಕೃಷ್ಣನ್‌ರವರು ಈ ಸಂದರ್ಭದಲ್ಲಿ ಮಾತನಾಡಿದರು.

## ಗುಜರಾತ್‌ನಲ್ಲಿ ಮೌ.ಶಿ.ಪ.

ಬರೋಡಾ ಕೇಂದ್ರದ ಸೋ.ವಿಲಾಸ್ ಭೋಂಡೆಯವರನ್ನು ಮೌ.ಶಿ.ಪ.,ದಕ್ಷಿಣ ಗುಜರಾತ್ ವಲಯದ ನಿರ್ವಾಹಕರನ್ನಾಗಿ ನೇಮಿಸಲಾಯಿತು. ಇಡೀ ಗುಜರಾತ್‌ನ ಸ್ವಯಂಸೇವಕರು ಮೌ.ಶಿ.ಪ. ಪಠ್ಯವನ್ನು ಶಿಕ್ಷಕರಿಗೆ ನೀಡಿ ಅವರಿಗೆ ತರಬೇತಿ ಕೊಡಲು ಅಣಿಯಾಗುತ್ತಿದ್ದಾರೆ. ಬರೋಡಾ, ವಾಪಿ, ಜಾಮ್‌ನಗರ್, ಭಾವ್‌ನಗರ್, ಅಹಮದಾಬಾದ್, ಸೂರತ್, ಆನಂದ್, ದಮನ್, ನವ್ಸಾರಿ, ವಲ್ಸಾಡ್, ಭುಜ್ ಮತ್ತು ರಾಜ್‌ಕೋಟ್‌ನಲ್ಲಿ ತಂಡಗಳು ಪಠ್ಯವನ್ನು ಸಿದ್ಧಗೊಳಿಸುವುದು, ಶಾಲೆಗಳನ್ನು ಸಂಪರ್ಕಿಸುವುದು, ಸ್ವಯಂಸೇವಕರ ತರಬೇತಿ ನಡೆಸುವುದಷ್ಟೇ ಅಲ್ಲದೆ ಹೆಚ್ಚಿನ ಅರಿವು ತರಲು ಅದನ್ನು ಅಭ್ಯಾಸಿಗಳಲ್ಲೂ ಹಂಚಲು ಕಾತರರಾಗಿದ್ದಾರೆ.

ಕೆಲವು ಶಾಲೆಗಳಲ್ಲಿ ಆದಾಗಲೇ ಮೌ.ಶಿ.ಪ. ಯ ತರಗತಿಗಳು ಪ್ರಾರಂಭವಾಗಿವೆ. SMRTI ನ ಹೊಸ ಪಠ್ಯಕ್ರಮ ಆಧಾರಿತ ಕಾರ್ಯಕ್ರಮವು ಭಾಗಿಗಳಲ್ಲಿ ಆಸಕ್ತಿ ಕೆರಳಿಸುತ್ತದೆ. ಶಿಕ್ಷಕರು ಬಹಳವಾಗಿ ಆನಂದಿಸಿದರು ಅಲ್ಲದೆ ಅವರಿಗೆ ಸೃಜನಾತ್ಮಕವಾಗಿ ರಚಿಸಿದ ಉಪಕರಣಗಳು ಮತ್ತು ವಿಧಾನಗಳು – ಸ್ವಯಂಸೇವಕರು ಉಪಯೋಗಿಸಿದ ಆಳೆತ್ತರದ ಆಕೃತಿಗಳೊಡನೆ ಕಾರ್ಡುಗಳು, ಪ್ರಸ್ತುತಿಗಳು, ಕಿರುಚಿತ್ರ, ಆಟ(ನಿಮ್ಮ ಸಾಮರ್ಥ್ಯವಿದ್ದಷ್ಟು ಗೆಲ್ಲಿರಿ) ಮತ್ತು ಸಮೂಹ ಚರ್ಚೆಗಳೂ ಸಹ ಪ್ರಿಯವಾದವು.

ಪ್ರತಿ ಅರ್ಧ ದಿನದ ಕಾರ್ಯಕ್ರಮದಲ್ಲಿ ಅಭ್ಯಾಸಿಗಳಿಗಾಗಿ ವಿವಿಧ ಚಟುವಟಿಕೆಗಳನ್ನು ನಡೆಸಿ ಅವರಲ್ಲಿ "ನವರತ್ನ" ಗುಣಗಳು ಬೆಳೆಯಲು ಪ್ರೋತ್ಸಾಹಿಸುವಂತೆ ನಿರ್ಧರಿಸಲಾಯಿತು.

ಸದ್ಯಕ್ಕೆ ಗುಜರಾತ್‌ನ ಎರಡೂ ವಲಯದ 10 ವಿವಿಧ ಕೇಂದ್ರಗಳ 13 ಶಾಲೆಗಳಲ್ಲಿ ಮೌ.ಶಿ.ಪ.ಯನ್ನು ಪ್ರಯೋಗಾತ್ಮಕವಾಗಿ ಅಳವಡಿಸುವ ಯೋಜನೆಯಿದೆ. ಪಠ್ಯವನ್ನು ಗುಜರಾತಿಯಲ್ಲಿ ಅನುವಾದಿಸುವ ಹೊಣೆಯನ್ನು ಸೋ. ತಾರಾ ಚೌಹಾಣ್ ಮತ್ತು ಅವರ ಅನುವಾದ ತಂಡವು ಹೊತ್ತಿದ್ದಾರೆ.

## ಕನಕಪುರ, ದ.ಕರ್ನಾಟಕ

ಕನಕಪುರದಲ್ಲಿ ಮೌ.ಶಿ.ಪ.ಯ ಸಭೆಯನ್ನು ಆಯೋಜಿಸಲು ಲಯನ್ಸ್ ಕ್ಲಬ್‌ನ ಸದಸ್ಯರಾದ ಸೋ. ಸ್ವಾಮಿ ಮತ್ತು ಸೋ.ವೆಂಕಟೇಶ್‌ರವರು ಮುಂದಾದರು. ಸೆಪ್ಟಂಬರ್ 13ರಂದು ಲಯನ್ಸ್ ಪ್ರೌಢಶಾಲೆ ಮತ್ತು ಹಂಸವಾಹಿನಿ ಪ್ರೌಢಶಾಲೆಯ 36 ಶಿಕ್ಷಕರ ಹಾಜರಿಯಲ್ಲಿ ಶಿಕ್ಷಕರ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಸೋ.ಮಾಧುರಿಯವರು 5 ನಿಮಿಷದ ಮೌನ ಪ್ರಾರ್ಥನೆಯೊಂದಿಗೆ ಸಭೆಯನ್ನು ಪ್ರಾರಂಭಿಸಿದರು. ಅವರು ಮಿಷನ್ನಿನ ಕಿರುಪರಿಚಯ ನೀಡಿ ನಂತರ "ಮೌಲ್ಯಗಳೆಂದರೇನು", "ಮೌಲ್ಯಗಳ ಅಗತ್ಯ", "ಶಿಕ್ಷಕರ ಮತ್ತು ಪಾಲಕರ ಪಾತ್ರ", "ಮಕ್ಕಳಿಗಾಗಿ ಸರಿಯಾದ ವಾತಾವರಣದ ಸೃಷ್ಟಿ" ಮುಂತಾದ ವಿಷಯಗಳನ್ನು ಕೈಗೆತ್ತಿಕೊಂಡರು. ಆಟಗಳು, ಉಪಕರಣಗಳು ಮತ್ತು ಸಮೂಹಚರ್ಚೆಗಳು ಸಭೆಯ ಅಂಗವಾಗಿದ್ದವು. ಭಾಗಿಗಳು ಅತ್ಯಾಸಕ್ತರಾಗಿದ್ದುದು ಕಂಡು ಬಂದಿತು. ಶಿಕ್ಷಕರು ಮೌ.ಶಿ.ಪ.ಯನ್ನು ತಮ್ಮ ತರಗತಿಯಲ್ಲಿ ಅಳವಡಿಸಿಕೊಳ್ಳಬೇಕೆಂದು ನಿರ್ಧರಿಸಿಕೊಂಡು ತೆರಳಿದರು. ಕನಕಪುರದ ಮೌ.ಶಿ.ಪ. ತಂಡವು ಶಾಲೆಗಳಿಗೆ ನಿಯಮಿತವಾಗಿ ಪುನಃ ಭೇಟಿ ನೀಡಿ ಶಿಕ್ಷಕರೊಡನೆ ಚರ್ಚಿಸಿ ಅವರಿಗೆ ಇದರ ಅಳವಡಿಕೆಯಲ್ಲಿ ಅಗತ್ಯವಿದ್ದರೆ ಹೆಚ್ಚಿನ ಸಹಾಯವನ್ನು ಒದಗಿಸುತ್ತದೆ ಮತ್ತು ಅವರ ಅಭಿಪ್ರಾಯವನ್ನು ತಿಳಿದುಕೊಳ್ಳುತ್ತದೆ.

## ರಾಂಚಿ

"ಜ್ಞಾನವನ್ನು ಸಮಾಜದ ಲಾಭಕ್ಕಾಗಿ ಅಲ್ಲದೆ ಕೇವಲ ಜ್ಞಾನಕ್ಕಾಗಿ ಮಾತ್ರ ಪಡೆದರೆ ಅದು ಅಲ್ಲಿಯೇ ಕೊನೆಗೊಳುತ್ತದೆ ಹಾಗೂ ಅತೃಪ್ತಿಕರ ಹತಾಶೆಯ ಕೂಪದೊಳಕ್ಕೆ ಒಯ್ಯುತ್ತದೆ. ವಿದ್ಯಾರ್ಥಿಗಳ ನಡತೆಯನ್ನು ರೂಪಿಸಿ ಅವರಿಗೆ ಜೀವನದ ಮೌಲ್ಯಗಳನ್ನು ಕಲಿಸದಿದ್ದರೆ ಶಿಕ್ಷಣವು ಒಂದು ಅರ್ಥವಿಲ್ಲದ ಆಚರಣೆ. ಅಪೂರ್ವ ರಾಷ್ಟ್ರದ ನಿರ್ಮಾಣಕ್ಕೆ ದೈಹಿಕವಾಗಿ ಮತ್ತು ಬೌದ್ಧಿಕವಾಗಿ ಬೇಕಾಗುವ ಸಾಮರ್ಥ್ಯವನ್ನು ಭಾರತದ ಪ್ರತಿಯೊಬ್ಬ ವಿದ್ಯಾರ್ಥಿಗೂ ಶೈಕ್ಷಣಿಕ ಸಂಸ್ಥೆಗಳು ನೀಡುವಂತಾಗಬೇಕು. ನಾವು ನಮ್ಮ ಪ್ರಾಚೀನ ಸಂಸ್ಕೃತಿಯ ಬಗ್ಗೆ ಹೆಮ್ಮೆ ಪಡುವಂತೆಯೇ ನಮ್ಮ ಭವಿಷ್ಯವೂ ಅದರಷ್ಟೇ ಉಜ್ವಲವಾಗಬೇಕು."
ಡಾ.(ಶ್ರೀಮತಿ) ಸರಳಾ ಬಿರ್ಲಾ

ರೂವಾರಿ ಸರಳಾ ಬಿರ್ಲಾರವರ ಮೌಲ್ಯಗಳಿಂದ ಪ್ರೇರಣೆಗೊಂಡ ರಾಂಚಿಯ ಮೌ.ಶಿ.ಪ. ಯ ಸ್ವಯಂಸೇವಕರು ಹೊಸ ಪಠ್ಯಪ್ರಕಾರವನ್ನು, ಅದರ ಅಗತ್ಯವನ್ನು ಸುಮಾರು 50 ಶಿಕ್ಷಕರಿಗೆ ಆಸಕ್ತಿಯುತ ಪ್ರಸ್ತುತಿಗಳೊಡನೆ ತಿಳಿಸಿಹೇಳುತ್ತಿರಲು ನಾಲ್ಕು ಘಂಟೆಗಳ ಈ ಕಾರ್ಯಕ್ರಮವು ಸುಲಲಿತವಾಗಿ ಸಾಗಿತು.

ಶಾಲೆಯು ತಮ್ಮ ಪಠ್ಯಕ್ರಮದೊಡನೆ ಇದನ್ನು ಮಿಳಿತಗೊಳಿಸುವ ಸಲುವಾಗಿ SMRTI ಯೊಡನೆ ಮುಂದಿನ ಮಾತುಕತೆಯಾಡಲು ಒಪ್ಪಿದ್ದಾರೆ.

ಸ್ವಯಂಸೇವಕರಾದ ಸುನಂದಾ ಚೌಹಾಣ್, ಅನಿತಾ ತಿವಾರಿ, ಶೀತಲ್ ಚೌಹಾನ್, ಅನುರಾಧಾ ಚೌಹಾನ್, ಸಂಗೀತಾ ಸೋಮಾನಿ, ಮನೋಜ್ ತಿವಾರಿ, ಡಾ. ಶ್ಯಾಮ್ ನಾರಾಯಣ್, ರಾಮಾವತಾರ್ ಸಾಹು, ಶೋಭಾ ಸಾಹು, ಅರುಣ್‌ಕುಮಾರ್ ಲಾಲ್‌ರವರು ಕಾರ್ಯಕ್ರಮದ ವ್ಯವಸ್ಥೆಯ ಜವಾಬ್ದಾರಿ ಹೊತ್ತಿದ್ದರು.

ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ



# ವಿದ್ಯಾರ್ಥಿ ಹಾಗೂ ಯುವಕರಲ್ಲಿ ಆಸಕ್ತಿ ಹುಟ್ಟಿಸುವುದು.

## ಅಹಮದಾಬಾದಿನಲ್ಲಿಯ ವಿಚಾರಗೋಷ್ಠಿ.

ಅಹಮದಾಬಾದಿನಲ್ಲಿಯ ನಿರ್ಮಾ ವಿಶ್ವವಿದ್ಯಾಲಯದ ಪ್ರಶಿಕ್ಷಣಾರ್ಥಿಗಳ ಗುಂಪೊಂದು ದಾರಿಯಲ್ಲಿ ಶ್ರೀ ರಾಮಚಂದ್ರ ಮಿಷನ್ನಿನ "ಧ್ಯಾನದ ಮೂಲಕ ಮನಸ್ಸಿನ ನಿಯಂತ್ರಣ" ಎಂಬ ಫಲಕವನ್ನೋದಿದರು. ಅವರು ಮಿಷನ್ನಿನ ಬಗ್ಗೆ ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳಲು ಉತ್ಸುಕರಾಗಿದ್ದರಾದ ಕಾರಣ, ಅಡಲೇಜ ಆಶ್ರಮದಲ್ಲಿ ವಿಚಾರಗೋಷ್ಠಿಯೊಂದನ್ನು ಆಯೋಜಿಸಲಾಯಿತು. 2ನೇ ಅಕ್ಟೋಬರ್ 2010 ರ ಈ 90 ನಿಮಿಷಗಳ ವಿಚಾರಗೋಷ್ಠಿಯು 19 ರಿಂದ 23 ವಯೋಮಿತಿಯವರಿಗಾಗಿತ್ತು. ಇದನ್ನು ಕೇಂದ್ರಪ್ರಮುಖರಾದ ಸೋ.ಜಿಗ್ನೇಶರವರು ನಡೆಸಿಕೊಟ್ಟರು. ಆಸಕ್ತರುಗಳಿಗೆಲ್ಲಾ ಅವರವರ ಊರಿನ ಕೇಂದ್ರಪ್ರಮುಖರ ಸಂಪರ್ಕದ ಮಾಹಿತಿಯನ್ನೀಯಲಾಯಿತು. ಇದೊಂದು ಮಿಷನ್ನಿನ ಫಲಕಗಳಮೂಲಕ ಈ ಕಡೆಗೆ ಆಕರ್ಷಿತರಾದ ಜಿಜ್ಞಾಸುಗಳ ಮನೋರಂಜಕ ಕಥೆಯಾಗಿದೆ.

## ಸಿದ್ದಿಪೆಠ್--ಆಂಧ್ರಪ್ರದೇಶ

ಇತ್ತೀಚೆಗೆ ಪೂರ್ಣಗೊಂಡ 2010 ರ ಪ್ರಬಂಧ ಲೇಖನ ಕಾರ್ಯಕ್ರಮದಲ್ಲಿ ಶ್ರೀರಾಮಚಂದ್ರ ಮಿಷನ್ ನೀಡಿದ ವಿಚಾರವನ್ನುದ್ಯುಕ್ತಗೊಳಿಸುವ ವಿಷಯಗಳಿಂದ ಪ್ರೇರಿತರಾಗಿ; ಗಜವಾಲ್ ದಲ್ಲಿಯ ಶಾಸಕೀಯ ಹೆಣ್ಣುಮಕ್ಕಳ ಡಿಗ್ರಿ ಕಾಲೇಜಿನ ಪ್ರಿನ್ಸಿಪಾಲರಾದ ಡಾ. ವೆಂಕಟರಮಣ ರವರು, ತಮ್ಮ ವಿದ್ಯಾರ್ಥಿಗಳಿಗಾಗಿ "ಮನಸ್ಸಿನ ನಿಯಂತ್ರಣ" ದ ವಿಷಯದಲ್ಲಿ ಮಾಹಿತಿಪರ ವಿಚಾರಗೋಷ್ಠಿಯೊಂದನ್ನು ಆಯೋಜಿಸಲು ಸಿದ್ದಿಪೆಠ್ ಕೇಂದ್ರದವರಿಗೆ ಮನವಿ ಮಾಡಿಕೊಂಡರು. ಅಕ್ಟೋಬರ್ 6, 2010 ರಂದು ವಿವಿಧ ವಿಭಾಗಗಳಿಂದ ಸುಮಾರು 80 ವಿಧ್ಯಾರ್ಥಿಗಳು ಈ ವಿಚಾರಗೋಷ್ಠಿಯಲ್ಲಿ ಭಾಗವಹಿಸಿದರು. "ಧ್ಯಾನದ ಮೂಲಕ ಮನಸ್ಸಿನ ನಿಯಂತ್ರಣ" ಹಾಗೂ "ತಮ್ಮ ಜೀವನದ ಉದ್ದೇಶವನ್ನು ಬೇಗನೆ ನಿರ್ಧರಿಸಿಕೊಳ್ಳುವ ಅವಶ್ಯಕತೆ"ಯ ಬಗ್ಗೆ ಪ್ರಶಿಕ್ಷಕರು ಮಾತನಾಡಿದರು.

## ಖಾನಾಪೂರ್--ಉತ್ತರ ಕರ್ನಾಟಕ.

ಸೆಪ್ಟೆಂಬರ್ 9, ನೇ ದಿನಾಂಕದಂದು, ಬೆಳಗಾಂವ್ ಜಿಲ್ಲೆಯ ಖಾನಾಪೂರ್ ದಲ್ಲಿಯ ಮರಾಠಾಮಂಡಳದ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ, "ವರ್ತಮಾನ ಕಾಲದಲ್ಲಿ ಉಚ್ಚಶಿಕ್ಷಣದಲ್ಲಿ ಅಧ್ಯಾತ್ಮಸಾಧನೆಯ ಆವಶ್ಯಕತೆ" ಎಂಬ ವಿಷಯದ ಮೇಲೆ ರಾಜ್ಯಮಟ್ಟದ ವಿಚಾರಗೋಷ್ಠಿ ಯನ್ನು ಆಯೋಜಿಸಲಾಗಿತ್ತು. ಇದರಲ್ಲಿ ಪಾಲ್ಗೊಳ್ಳಲು, ಹಾಗೂ ಕಾಲೇಜಿನ ಸ್ಮರಣಿಕೆಯಲ್ಲಿ ಪ್ರಕಟಿಸಲು ಒಂದು ಲೇಖನವನ್ನು ಕೊಡಲು ಶ್ರೀ ರಾಮಚಂದ್ರ ಮಿಷನ್ನಿಗೂ ಆಮಂತ್ರಿಸಲಾಗಿತ್ತು. ರಾಜ್ಯದ ಎಲ್ಲೆಡೆಗಳಿಂದ ಸುಮಾರು 150 ಪ್ರತಿನಿಧಿಗಳು ಹಾಗು ವಿದ್ಯಾರ್ಥಿಗಳು ಒಟ್ಟುಗೂಡಿದ್ದರು ಸ.ರಾಜು ಕಾಶಂಪೂರ್‌ಕರ್‌ರವರು ಮಿಷನ್ನನ್ನು ಪ್ರತಿನಿಧಿಸಿ, ವರ್ತಮಾನ ಪರಿಸ್ಥಿತಿಯಲ್ಲಿ ಅಧ್ಯಾತ್ಮದ ಆವಶ್ಯಕತೆ, ಮನುಷ್ಯ ಜೀವನದ ನಿಜವಾದ ಗುರಿ, ಹಾಗೂ ನವಯುವಕರು ಮಾಡಬಹುದಾದ ಅಧ್ಯಾತ್ಮಿಕ ಸಾಧನೆ ಮುಂತಾದ ವಿಷಯಗಳನ್ನು ಕುರಿತು ಮಾತನಾಡಿದರು. ನಂತರ ಈ ಪದ್ಧತಿಯ ಬಗ್ಗೆ ಆಸಕ್ತಿಯನ್ನು ವ್ಯಕ್ತಪಡಿಸಿದವರಿಗೆ ಮಿಷನ್ನಿನ ಹಸ್ತಪತ್ರಿಕೆಗಳನ್ನು ಹಂಚಲಾಯಿತು.

## ಯುವಕರ ಪ್ರಗತ ವಿಚಾರ ಗೋಷ್ಠಿ, ಬೆಂಗಳೂರು.

ದಿನಾಂಕ 10 ರಿಂದ 12 ರ ವರೆಗೆ ಮೂರು ದಿನಗಳ ಯುವಕರಿಗಾಗಿ ನಿವಾಸಿ ಪ್ರಗತ ವಿಚಾರಗೋಷ್ಠಿಯೊಂದನ್ನು ಬೆಂಗಳೂರಿನಲ್ಲಿ ನೆರವೇರಿಸಲಾಯಿತು. "ನಾವು–ಒಂದು ಭವಿಷ್ಯ" ಎಂಬದು ವಿಷಯವಾಗಿತ್ತು. ಸಾಧನೆ, ಹತ್ತು ನಿಯಮಗಳು, ಬದಲಾವಣೆಗೆ ಪ್ರತಿಕಾರ, ಗುರಿಯನ್ನೊಪ್ಪಿಕೊಳ್ಳುವುದು,ಅಹಂಕಾರಕ್ಕೆ ಸವಾಲು, ನಿಸ್ವಾರ್ಥ ಸೇವೆ, ಭವಿಷ್ಯದಲ್ಲಿ ಬಾವುಟವನ್ನು ಎತ್ತಿ ಹಿಡಿಯುವ ಹೊಣೆಗಾರಿಕೆ ಮುಂತಾದ ಅನೇಕ ವಿಷಯಗಳ ಬಗ್ಗೆ ಆಳವಾದ ತಿಳುವಳಿಕೆಯನ್ನು ಪಡೆಯಲೊಂದು ವೇದಿಕೆಯನ್ನು ಈ ವಿಭಾಗದ ಯುವಕರಿಗೆ ಒದಗಿಸಿಕೊಡುವುದೇ ಇದರ ಉದ್ದೇಶವಾಗಿತ್ತು. ಈ ವಿಚಾರಗೋಷ್ಠಿಯಲ್ಲಿ 20 ರಿಂದ 35 ವರ್ಷ ವಯಸ್ಸಿನವರಿಗೆ ಹಾಗೂ ಸಹಜಮಾರ್ಗದಲ್ಲಿ ಮೂರು ವರ್ಷಕ್ಕಿಂತ ಹೆಚ್ಚು ಅನುಭವವಿರುವ 31 ಅಭ್ಯಾಸಿಗಳು ಹಾಜರಿದ್ದರು. ಸತ್ರಕ್ಕೆ ಮುಂಚಿತವಾಗಿಯೇ ಯುವಕರೊಂದಿಗೆ ಚರ್ಚಿಸಿ ವಿಷಯಗಳನ್ನು ತೀರ್ಮಾನಿಸಲಾಗಿತ್ತು. ಸಂಯೋಜಕರು ತಮ್ಮ ಆಧ್ಯಾತ್ಮಿಕ ಪ್ರವಾಸದ ಅನುಭವದಿಂದಲು ಹಾಗು ಸದ್ಗುರುಗಳ ಜೊತೆಗಿನ ವಹಿವಾಟಿನಲ್ಲಿ ಕಲಿತ ಪಾಠದ ಆಧಾರದ ಮೇಲೆ, ಪ್ರಾಯೋಗಿಕ ಒಳನೋಟವನ್ನಿಟ್ಟುಕೊಂಡು ತಾತ್ವಿಕ ವಿಷಯಗಳನ್ನು ಅಳವಡಿಸಿ ಬಹಳ ಉತ್ತಮ ಕಾರ್ಯವನ್ನೆಸಗಿದ್ದರು.

ಪ್ರತಿಸಾದವೂ ಸಹ ಉತ್ತೇಜನಕರ ವಾಗಿದ್ದುವು. ಕೆಲವರು, ಮನಸ್ಸು,ಹಾಗು ಹೃದಯದಲ್ಲಿಯ ವ್ಯತ್ಯಾಸವನ್ನು ಮೊಟ್ಟಮೊದಲಬಾರಿಗೆ ತಿಳಿದುಕೊಂಡುದುದಾಗಿಯೂ, ಮತ್ತೆ ಕೆಲವರು ಈ ವಿಚಾರಗೋಷ್ಠಿಯು ತಮ್ಮನ್ನು ಸಹಜಮಾರ್ಗದ ವಿವಿಧ ಅಂಗಗಳ ವಿವರವಾದ ಜ್ಞಾನವನ್ನಿತ್ತಿದೆ ಎಂದೂ ಹಾಗೂ ಇನ್ನು ಮುಂದೆ ತಮ್ಮ ಸಾಧನೆಯನ್ನು ಸರಿಯಾಗಿ ಮಾಡಲು ನಿರ್ಧರಿಸಿದುದಾಗಿ ಹೇಳಿದರು.

## ಮಂಗಳೂರು, ದಕ್ಷಿಣ ಕರ್ನಾಟಕ.

ಸೆಪ್ಟೆಂಬರ್ 18 ರಂದು ಶ್ರೀರಾಮಚಂದ್ರ ಮಿಷನ್ ಶ್ರೀನಿವಾಸ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜಮೆಂಟ ಸ್ಟಡೀಸ್‌ನಲ್ಲಿ ಹೊರಾಂಗಣ ಸಭೆಯೊಂದನ್ನು ಆಯೋಜಿಸಿತು. 120 ಎಂ.ಬಿ.ಎ. ವಿದ್ಯಾರ್ಥಿಗಳು ಹಾಜರಿದ್ದರು. ಕಾರ್ಯಕ್ರಮವನ್ನು ಅತಿಥಿಗಳ ಉಪನ್ಯಾಸದ ವೇಳೆಯಲ್ಲಿ ಸಹೋದರ ಪ್ರಸಾದ ಕೃಷ್ಣ ರವರು ನಡೆಸಿಕೊಟ್ಟರು. ಉಪನ್ಯಾಸದ ವಿಷಯವು "ಮನಸ್ಸಿನ ನಿಯಂತ್ರಣಕ್ಕೆ ಧ್ಯಾನ" ಎಂಬುದಾಗಿತ್ತು. ಸ. ಕೃಷ್ಣರವರು ಜೀವನದಲ್ಲಿ ಗುರಿಯನ್ನಿಟ್ಟುಕೊಳ್ಳುವ ಆವಶ್ಯಕತೆ ಹಾಗು ವೇಳೆಯ ಸದುಪಯೋಗ ಮಾಡಿಕೊಳ್ಳುವುದರ ಬಗೆಗೆ ವಿವರಿಸಿದರು. ಆದುದರಿಂದ ಸದ್ಯದ ವೇಳೆಯನ್ನು ಉದ್ದೇಶಪೂರಿತವಾಗಿಯೂ ಪರಿಣಾಮಕಾರಿಯಾಗಿಯೂ ಉಪಯೋಗಿಸಿಕೊಳ್ಳಲು ಸಹಜಮಾರ್ಗ ಸಾಧನೆಯನ್ನು ಮಾಡಿ ನೋಡಲು ಸಭಿಕರನ್ನು ಆಹ್ವಾನಿಸಿದರು. ಅವರು ಶ್ರೀರಾಮಚಂದ್ರ ಮಿಷನ್ ಹಾಗೂ ಇಲ್ಲಿ ಮಾಡುವ ಸಾಧನಾ ಪದ್ಧತಿಯ ಬಗ್ಗೆ ಸಂಕ್ಷಿಪ್ತ ವಿವರಣೆಯನ್ನಿತ್ತರು. ಪ್ರಾಚಾರ್ಯರು ಹಾಗೂ ಉಪಪ್ರಾಚಾರ್ಯರು ಸಂತೋಷ ವ್ಯಕ್ತಪಡಿಸಿದರು, ಹಾಗೂ 16 ವಿದ್ಯಾರ್ಥಿಗಳು ಮಿಷನ್ನಿಗೆ ಸೇರಿಕೊಳ್ಳುವ ಇಚ್ಛೆ ವ್ಯಕ್ತಪಡಿಸಿ ತಮ್ಮ ಹೆಸರುಗಳನ್ನು ನೋಂದಾಯಿಸಿದರು.

ಖಾನಾಪುರ್




ಬೆಂಗಳೂರು



# ಪ್ರಭಾಕೇಂದ್ರ





## ಸೋನಿಪತ್, ಹರಿಯಾಣ

ಸೋನಿಪತ್ ಆಶ್ರಮವು ಸೋನಿಪತ್–ಬಹಲ್ಗಢ ರಸ್ತೆಗೆ ಹೊಂದಿಕೊಂಡ ಫ಼ಾಜಿಲಪೂರ್ ಪವರ್ ಹೌಸಿನ ಹತ್ತಿರ ಸೆಕ್ಟರ್ 12, ಭಾಗ 4ರಲ್ಲಿ ಸ್ಥಿತವಾಗಿದೆ. ಇದು ಸೋನಿಪತ್ ರೇಲ್ವೆ ನಿಲ್ದಾಣದಿಂದ 4 ಕಿ.ಮೀ. ಹಾಗು ಜನರಲ್ ಬಸ್ ನಿಲ್ದಾಣದಿಂದ 3 ಕಿ.ಮೀ. ಅಂತರದಲ್ಲಿದೆ. ನವದೆಹಲಿ–ಚಂಡೀಗಢ್ ರಾಷ್ಟ್ರೀಯ ಮಾರ್ಗ ಕ್ರ. 1, ಬಹಲ್ಗಢ್ ಚೌಕವು ಕೇವಲ 5 ಕಿ.ಮೀ. ದೂರದಲ್ಲಿದೆ. 2003ನೇ ಇಸವಿಯಲ್ಲಿ, ಹರಿಯಾಣ ನಗರ ವಿಕಾಸ ಪ್ರಾಧಿಕಾರವು (HUDA) 1140 ಚ.ಮೀ. ಅಳತೆಯ ಭೂಪ್ರದೇಶವನ್ನು ನಿಗದಿಪಡಿಸಿತು. ಈ ಭೂಮಿಯ ಸಂಪೂರ್ಣ ಬೆಲೆಯ ಮೊತ್ತವನ್ನು ಸೋನಿಪತ್ ಕೇಂದ್ರದ ಅಭ್ಯಾಸಿಗಳು ವಹಿಸಿಕೊಂಡಿದ್ದರು ಹಾಗೂ ಪೂಜ್ಯ ಗುರುಗಳಿಂದ ಡಿಸೆಂಬರ್ 5, 2003 ರಂದು ಭೂಮಿ ಪೂಜೆಯನ್ನು ನೆರವೇರಿಸಲಾಯಿತು.

ಕಟ್ಟಡದ ಕಾರ್ಯವು ಅಕ್ಟೋಬರ್ 9, 2005 ರಂದು ಸೋನಿಪತ್ ಕೇಂದ್ರದ ಎಲ್ಲರಿಗಿಂತ ಕಿರುಪ್ರಾಯದ ಅಭ್ಯಾಸಿಯ ಹಸ್ತದಿಂದ ಅಡಿಗಲ್ಲನ್ನಿಟ್ಟು ಪ್ರಾರಂಭಿಸಲಾಯಿತು. ಆಶ್ರಮ ಕಟ್ಟಡದ ಕಾರ್ಯವು ಅಕ್ಟೋಬರ್ 2007 ನಲ್ಲಿ ಪೂರ್ಣಗೊಂಡಿತು. ಸೋನಿಪಥ್ ಕೇಂದ್ರದ ಅಭ್ಯಾಸಿಗಳು ಮುಕ್ತಹಸ್ತದಿಂದ ಹಾಗೂ ತುಂಬು ಹೃದಯದಿಂದ ವಸ್ತುಗಳ ರೂಪದಲ್ಲಿ ಹಾಗೂ ಸ್ವಯಂಸೇವೆಯ ರೂಪದಲ್ಲಿಯೂ ಸಹಕರಿಸಿದರಾದ ಕಾರಣ ಕಟ್ಟಡದ ವೆಚ್ಚದಲ್ಲಿ ಗಣನೀಯ ಉಳಿತಾಯ ವಾಯಿತು.

ಫ಼ೆಬ್ರುವರಿ 2,2009 ಬಸಂತಪಂಚಮಿಯ ದಿನ ಮೊಟ್ಟಮೊದಲನೆಯ ಸತ್ಸಂಗವನ್ನು ನೆರವೇರಿಸಲಾಯಿತು. ಆಶ್ರಮ ಕಟ್ಟಡದ ಉದ್ಘಾಟನೆಯನ್ನು ಫ಼ೆಬ್ರುವರಿ,7, 2009 ರಂದು ಪೂಜ್ಯ ಗುರುಗಳಿಂದ ಮಾಡಲಾಯಿತು. ಈ ಪ್ರಸಂಗದಲ್ಲಿ ಮಾತನಾಡಿ, ಅವರು "ಒಂದು ವೇಳೆ ದೇವರಿಗೆ ಧರ್ಮವೆಂಬುದೇನಾದರೂ ಇದ್ದುದಾದರೆ, ತನ್ನನ್ನು ಪ್ರಕಟಿಸಿಕೊಳ್ಳಲು ಅಥವಾ ತನ್ನ ಅಸ್ತಿತ್ವವನ್ನು ತೋರಿಸಲು ಮಾತ್ರ. ದೇವರೆಂದರೆ ಪ್ರೇಮ. ನಾವು ಪ್ರೇಮಿಸುವುದನ್ನು ಕಲಿತುದಾದರೆ ನಾವು ಸಹ ದೇವರಂತಾಗುತ್ತೇವೆ."

ಆಶ್ರಮದ ಆಚ್ಛಾದಿತ ಕಟ್ಟಡದ ಕ್ಷೇತ್ರ 4162 ಚ.ಅ.ಯ ತಳಭಾಗ, ಹಾಗು 4027 ಚ.ಅ. ಮೊದಲನೆಯ ಅಂತಸ್ತಿನಲ್ಲಿಯೂ ಇದೆ. ತಳಭಾಗದಲ್ಲಿ ಎರಡು ಸಾಮಾನ್ಯ ನಿವಾಸಸ್ಥಾನಗಳಿದ್ದು, ಪ್ರತಿಯೊಂದರಲ್ಲಿ ಸುಮಾರು 100 ಅಭ್ಯಾಸಿಗಳಿಗೆ ಸಾಕಾಗುವಷ್ಟು ಸ್ಥಳಾವಕಾಶವಿದೆ. ಮೊದಲನೆಯ ಅಂತಸ್ತಿನಲ್ಲಿ ತನ್ನ ಎರಡೂ ಕಡೆಗೂ ವರಾಂಡಾಗಳನ್ನು ಹೊಂದಿದ್ದ ಧ್ಯಾನಮಂದಿರವಿದ್ದು, ಅದರಲ್ಲಿ ಎತ್ತರಿಸಲ್ಪಟ್ಟ ಮಂಟಪವಿದೆ. ಸುಂದರವಾದ ದೀಪಸಮೂಹವು ಧ್ಯಾನಮಂದಿರದ ಗುಮ್ಮಟದಲ್ಲಿ ಜೋತಾಡುತ್ತಿರುತ್ತದೆ. ಸುಸಜ್ಜಿತ ಹಾಗು ವಿಶಾಲವಾದ ಕಾರ್ಯಾಲಯವು ತಳಭಾಗದಲ್ಲಿದೆ. ಅದರಲ್ಲಿ ಕಂಪ್ಯೂಟರ್ ಹಾಗು ಪ್ರೊಜೆಕ್ಟರಗಳಿವೆ. ಅಭ್ಯಾಸಿಗಳ ಪ್ರಶಿಕ್ಷಣ ಕಾರ್ಯಕ್ರಮಗಳಲ್ಲಿ ಇವನ್ನು ಉಪಯೋಗಿಸಲಾಗುತ್ತದೆ.

ರವಿವಾರದ ಬೆಳಗಿನ ಹಾಗು ಬುಧವಾರ ಸಾಂಯಕಾಲದ ಸತ್ಸಂಗಗಳನ್ನು ಈ ಆಶ್ರಮದಲ್ಲಿ ನಿಯಮಿತವಾಗಿ ನಡೆಸಲಾಗುತ್ತದೆ. ಗುರುಗಳ ಜನ್ಮದಿನೋತ್ಸವದ ಭಂಡಾರಗಳು ಇಲ್ಲಿ ನೆರವೇರಿಸಲಾಗುತ್ತದೆ. ಪ್ರತಿ ತಿಂಗಳ ಮೊದಲನೆಯ ರವಿವಾರದಂದು ಪೂರ್ಣದಿನದ ಕಾರ್ಯಕ್ರಮವಿದ್ದು, ಆ ದಿನ ಅಭ್ಯಾಸಿ ಪ್ರಶಿಕ್ಷಣ ಕಾರ್ಯಕ್ರಮವು ನಿಯಮಿತವಾಗಿ ಮಾಡಲಾಗುತ್ತದೆ.

ಆಶ್ರಮ ಕಟ್ಟಡದ ಮೂರು ಕಡೆಗೆ ಬಯಲಾಗಿದ್ದು, ಶ್ರೀರಾಮ ಶಿಕ್ಷಾ ಸದನವು ಇನ್ನೊಂದುಕಡೆಗೆ ಆವರಿಸಿದೆ. ಎರಡು ದೊಡ್ಡ ದ್ವಾರಗಳು ಆಶ್ರಮವನ್ನು ಅಗಲವಾದ ಸೆಕ್ಟರ್ ದಾರಿಗೆ ಕೂಡಿಸುತ್ತವೆ. ಸುಂದರವಾದ ಹುಲ್ಲುಹಾಸಿಗೆ, ಹೂದೋಟ ಮತ್ತು ಕಾರಂಜಿಗಳು ಆಶ್ರಮದ ಸೌಂದರ್ಯವನ್ನು ಹೆಚ್ಚಿಸುತ್ತವೆ.







To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org

© 2009 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.